## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ


بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّىْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

**ವರ್ಷ: 05**

**ಕನ್ನಡ ಬದರ್ ವಾರ ಪತ್ರಿಕೆ**
**WEEKLY BADAR QADIAN KANNADA**

**ಸಂಚಿಕೆ: 28**

**ವಾರ್ಷಿಕ ಶುಲ್ಕ ರೂ.600/–**

**ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.**

**11 ಜುಲೈ 2024, 11 ವಫಾ 1403 ಹಿಜರಿ ಶಮ್‌ಸಿ,**
**04 ಮುಹರ್ರಮ್ 1445 ಹಿಜರಿ ಖಮರಿ.**


## ಅಲ್ಲಾಹನ ಉಪದೇಶ

يٰٓاَيُّهَا الَّذِيْنَ اٰمَنُوْٓا اٰمِنُوْا بِاللّٰهِ
وَرَسُوْلِهٖ وَالْكِتٰبِ الَّذِيْ نَزَّلَ
عَلٰى رَسُوْلِهٖ وَالْكِتٰبِ الَّذِيْٓ اَنْزَلَ
مِنْ قَبْلُ (النساء:137)

**(ಅನ್ನಿಸಾಅ : 137)**

**ಅಂದರೆ: ಎಲೈ ವಿಶ್ವಾಸಿಗಳೇ, ಅಲ್ಲಾಹನಲ್ಲೂ ಅವನ ಸಂದೇಶವಾಹಕನಲ್ಲೂ ಅವನ ಸಂದೇಶವಾಹಕನಿಗೆ ಅವನು ಅವತೀರ್ಣಗೊಳಿಸಿದ ಗ್ರಂಥದಲ್ಲೂ ಅದಕ್ಕೆ ಮುಂಚೆ ಅವನು ಅವತೀರ್ಣಗೊಳಿಸಿದ ಗ್ರಂಥದಲ್ಲೂ ವಿಶ್ವಾಸವಿರಿಸಿರಿ.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

**ಮೃತನನ್ನು ಪ್ರಶಂಸಿಸುವುದು**

(1367) ಹಝ್ರತ್ ಅನಸ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ– ಜನರು ಜನಾಝ (ಶವ)ದ ಬಳಿಯಿಂದ ಹೋದರು. ಅವರು ಆ ಶವವನ್ನು ಕಂಡು ಆತನನ್ನು ಹೊಗಳಿದರು, ಆಗ ನಬಿ(ಸ) ಹೇಳಿದರು: ಆತನ್ನು ನೀಡಲಾಯಿತು! ಮತ್ತೆ ಅವರು ಮತ್ತೊಂದು ಶವದ ಬಳಿಯಿಂದ ಹೋದರು, ಆಗ ಅವರು ಆ ಶವವನ್ನು ಕಂಡು ನಿಂದಿಸಿದರು, ನಬಿ ಕರೀಂ(ಸ) ಹೇಳಿದರು: ಆತನನ್ನು ಸಹ ನೀಡಲಾಯಿತು. ಅದಕ್ಕೆ ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಕೇಳಿದರು ಯಾ ರಸೂಲಲ್ಲಹ್ ಏನು ನೀಡಲಾಯಿತು? ನಬಿ(ಸ) ಹೇಳಿದರು: ಯಾರನ್ನು ನೀವು ಪ್ರಶಂಸಿರುವಿರೋ ಅವನ ಮೇಲೆ ಸ್ವರ್ಗ ನಿಶ್ಚಿತವಾಯಿತು ಮತ್ತು ಯಾರನ್ನು ನೀವು ನಿಂದಿಸಿದ್ದೀರಿ, ಅವನ ಮೇಲೆ ನರಕ ನಿಶ್ಚಿತವಾಯಿತು, ನೀವು ಈ ಭೂಮಿಯ ಮೇಲೆ ಸಾಕ್ಷಿಯಾಗಿದ್ದೀರಿ.

(1368) ಅಬುಲ್ ಅಸ್ವದ್ ವರದಿ ಮಾಡಿತ್ತಾರೆ– ನಾನು ಮದೀನಕ್ಕೆ ಬಂದಾಗ ಅಲ್ಲಿ ಮಹಾಮಾರಿ ಹರಡಿತ್ತು. ನಾನು ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರವರ ಬಳಿ ಕುಳಿತಿದ್ದೆ. ಅವರ ಬಳಿಯಿಂದ ಒಂದು (ಜನಾಝ) ಶವಯಾತ್ರೆ ಹೊರಡಿತ್ತು, ಆತನನ್ನು ಅವರು ಚನ್ನಾಗಿ ಹೊಗಳಿದರು. ಹಝ್ರತ್ ಉಮರ್(ರ) ಹೇಳಿದರು: ಆತನಿಗೆ ನೀಡಲಾಯಿತು! ಇನ್ನೊಂದು ಶವಯಾತ್ರೆ ಹೊರಡಿತ್ತು ಆತನನ್ನು ಸಹ ಹೊಗಳಿದರು, ಹಝ್ರತ್ ಉಮರ್(ರ) ಹೇಳಿದರು: ಆತನಿಗೆ ನೀಡಲಾಯಿತು! ಮೂರನೆಯದ್ದೊಂದು ಶವಯಾತ್ರೆ ಹೊರಡಿತ್ತು ಆತನನ್ನು ಕಂಡು ಅವರು ತೆಗಳಿದರು. ಹಝ್ರತ್ ಉಮರ್(ರ) ಹೇಳಿದರು: ಆತನಿಗೂ ನೀಡಲಾಯಿತು! ಅಬುಲ್ ಅಸ್ವದ್ ಹೇಳುತ್ತಿದ್ದರು– ನಾನು ಕೇಳಿದೆ ಯಾ ಅಮೀರಲ್ ಮುಮಿನೀನ್ ಏನು ನೀಡಲಾಯಿತು ಎಂದಿದ್ದೀರಿ? ಅದಕ್ಕೆ ಅವರು ಹೇಳಿದರು: ನಾನು ನಬಿ(ಸ) ಹೇಳಿದ್ದನ್ನು ಹೇಳಿರುತ್ತೇನೆ ಯಾವ ಮುಸಲ್ಮಾನನ ಪರವಾಗಿ ನಾಲ್ಕು ಮುಸಲ್ಮಾನರು ಒಳ್ಳೆಯ ಸಾಕ್ಷಿ ನೀಡುವರೋ– ಅಲ್ಲಾಹನು ಅವನನ್ನು ಸ್ವರ್ಗಕ್ಕೆ ಕಳುಹಸುವನು. ನಾವು ಕೇಳಿದೆವು ಮೂವರು ಸಾಕ್ಷಿ ನೀಡಿದರೆ? ಅವರು(ಸ) ನುಡಿದರು: ಅವರು ಸಹ! ನಾವು ಕೇಳಿದೆವು: ಇಬ್ಬರು ಸಾಕ್ಷಿ ನೀಡಿದರೆ– ಅವರು(ಸ) ನುಡಿದರು: ಎರಡು ಆದರು ಸರಿ. ಮತ್ತೆ ನಾವು ಒಬ್ಬರ ಸಾಕ್ಷಿಯ ಬಗ್ಗೆ ಕೇಳಲಿಲ್ಲ.

**(ಸಹೀಹ್ ಬುಖಾರಿ, ಸಂಪುಟ–2, ಕಿತಾಬುಲ್ ಜನಾಏಝ್, ಮುದ್ರಣ 2006 ಖಾದಿಯಾನ್)**

ಕಾಗದ ಪತ್ರದ ಪ್ರಭಾವ ಬೀರಲು ಎಷ್ಟು ಸಾಧ್ಯ. ಅದು ಇಂದು ಇದ್ದರೆ ನಾಳೆ ಮಾಯವಾಗಬಹುದು. ಆದರೆ ಆಕಾಶದಲ್ಲಿ ಏನೆಲ್ಲಾ ಬರೆಯಲ್ಪಡುತ್ತದೆ. ಅದು ಎಂದೂ ವ್ಯರ್ಥವಾಗುವುದಿಲ್ಲ. ಅದರ ಪ್ರಭಾವ ಶಾಶ್ವತವಾದುದು.

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಸಾಂಪತ್ತಿಕ ತ್ಯಾಗ ಕೇವಲ ಅಲ್ಲಾಹನ ಸಂತೃಪ್ತಿಗೋಸ್ಕರ ಆಗಬೇಕು. ಯಾವನೋ ಒಬ್ಬ ವ್ಯಕ್ತಿ ತನ್ನ ಹೆಸರು ಪ್ರಕಟಿಸಲು ಚಂದ ಕೊಡುವುದಾದರೆ ಅಥವಾ ಧಾರ್ಮಿಕ ಅಗತ್ಯಗಳಿಗಾಗಿ ಕೊಡುವುದಾದರೆ, ನಿಶ್ಚಿತವಾಗಿ ತಿಳಿದುಕೊಳ್ಳಿರಿ. ಅವನು ಲೌಕಿಕ ಪ್ರಸಿದ್ಧಿ ಮತ್ತು ತನ್ನ ಹೆಸರು ತೋರ್ಪಡಿಸುವ ಬಯಕೆ ಹೊಂದಿರುತ್ತಾನೆ. ಆದರೆ ಯಾರು ಕೇವಲ ಅಲ್ಲಾಹನಿಗೋಸ್ಕರ ಈ ಮಾರ್ಗದಲ್ಲಿ ಹೆಜ್ಜೆ ಇಡುವನೋ ಮತ್ತು ಧರ್ಮಸೇವೆಗಾಗಿ ಪಣತೊಡುವನೋ, ಅವನಿಗೆ ಬೇರೆ ಮಾತಿನೆಡೆ ಲಕ್ಷ್ಯವಿರುವುದಿಲ್ಲ, ಲೌಕಿಕ ಹೆಸರುವಾಸಿತನದಿಂದ ಏನೂ ಪ್ರಯೋಜನವಿಲ್ಲ. ಅದು ತನ್ನೊಳಗೆ ಯಾವ ಪ್ರಭಾವವು ಹೊಂದಿರುವುದಿಲ್ಲ. ಆಕಾಶದ ಮೇಲೆ ಬರೆಯಲ್ಪಡುವ ಹೆಸರುಗಳೇ ಉತ್ತಮವಾಗಿರುತ್ತವೆ. ಕಾಗದ ಪತ್ರ ಎಷ್ಟು ಪ್ರಭಾವ ಬೀರಲು ಸಾಧ್ಯ. ಇಂದು ಇದ್ದರೆ ನಾಳೆ ಮಾಯವಾಗುವುದು. ಆದರೆ ಆಕಾಶದಲ್ಲಿ ಏನೆಲ್ಲಾ ಬರೆಯಲ್ಪಡುತ್ತದೆ. ಅದು ಎಂದೂ ವ್ಯರ್ಥ ಹೋಗುವುದಿಲ್ಲ, ಅದರ ಪ್ರಭಾವ ಶಾಶ್ವತವಾದುದು. ನನ್ನ ಬಹಳಷ್ಟು ನಿಷ್ಠಾವಂತ ಮಿತ್ರರಿದ್ದಾರೆ. ಅವರ ಹೆಸರು ಸಹ ನೀವು ತಿಳಿದಿರಲಿಕ್ಕಿಲ್ಲ. ಆದರೆ ಅವರು ಸದಾಕಾಲ ನನಗೆ ನೆರವು ನೀಡಿದ್ದಾರೆ. ಅಂದ ಹಾಗೆ ನಾನು ಉದಾಹರಣೆಯಾಗಿ ಹೇಳಬಯಸುತ್ತೇನೆ. ಮಿರ್ಝಾ ಯೂಸೂಫ್ ಬೇಗ್ ಸಾಹಿಬ್ ನನ್ನ ಅತ್ಯಂತ ನಿಷ್ಠಾವಂತರು ಹಾಗೂ ಸತ್ಯಸಂಧ ಮಿತ್ರರಾಗಿದ್ದಾರೆ. ನಾನು ಅವರ ಹೆಸರು ಏಕೆ ಪ್ರಸ್ತಾಪಿಸಿದ್ದೇನೆಂದರೆ ಆ ಮೂಲಕ ಸಹೋದರ ಭಾವನೆ ಉಂಟಾಗುತ್ತದೆ, ಪರಿಚಯ ಹಾಗೂ ಪ್ರೀತಿ ಹುಟ್ಟುತ್ತದೆ. ಮಿರ್ಝಾ ಸಾಹಿಬ್ ನನ್ನ ಗೌಪ್ಯ ಜೀವನ ನಡೆಸುವ ಕಾಲದಿಂದ ಸಂಬಂಧವಿರಿಸಿಕೊಂಡಿದ್ದಾರೆ. ನಾನು ನೋಡುತ್ತಿದ್ದೇನೆ. ಅವರ ಹೃದಯ ಪ್ರೀತಿ ಹಾಗೂ ನಿಷ್ಠೆಯಿಂದ ತುಂಬಿ ಹೋಗಿದೆ ಮತ್ತು ಅವರು ಸದಾಕಾಲ ಧರ್ಮಸೇವೆ ಮಾಡಲು ತಮ್ಮೊಳಗೆ ಒಂದು ಉತ್ಸಾಹ ಹೊಂದಿದವರಾಗಿದ್ದಾರೆ. ಇವರಂತೆಯೇ ಇನ್ನು ಹಲವು ಮಿತ್ರರಿದ್ದಾರೆ. ಎಲ್ಲರೂ ತಮ್ಮ ತಮ್ಮಲ್ಲಿ ವಿಶ್ವಾಸ ಮತ್ತು ಆಧ್ಯಾತ್ಮಿಕ ಜ್ಞಾನಗಳನ್ವಯ ಧರ್ಮಪ್ರೇಮದ ಉತ್ಸಾಹದಿಂದ ಪುಳಕಿತರಾಗಿರುತ್ತಾರೆ.

**ವಿಶ್ವಾಸ ದೃಢತೆ ಇಲ್ಲದಿದ್ದರೆ ಏನು ಮಾಡಲಾಗದು.**

ನನ್ನ ಪ್ರಕಾರ ಸತ್ಕರ್ಮಗಳ ಭಾಗ್ಯ ನಿಧಾನವಾಗಿ ಬೆಳೆಯುತ್ತಾ ಬರುತ್ತದೆ. ಅದರಲ್ಲಿ ಯಾವ ಸಂಶಯವೂ ಇಲ್ಲ. ವಿಶ್ವಾಸ ದೃಢತೆ ಇರುವವರೆಗೆ ಸತ್ಕರ್ಮಗಳಲ್ಲಿ ಶಕ್ತಿ ಉಂಟಾಗುತ್ತದೆ. ಎಲ್ಲಿಯವರೆಗೆಂದರೆ ಈ ವಿಶ್ವಾಸ ದೃಢತೆ ಪೂರ್ಣ ಪ್ರಮಾಣದಲ್ಲಿ ಬೆಳವಣಿಗೆ ಹೊಂದಿದರೆ, ಅಂತಹ ಸತ್ಯವಿಶ್ವಾಸಿಯೊಬ್ಬರು ಶಹೀದ್ ಸ್ಥಾನ ಪಡೆಯುವವನಾಗುತ್ತಾನೆ. ಏಕೆಂದರೆ ಯಾವ ಅಡೆತಡೆಯು ಅವನ ಮಾರ್ಗದಲ್ಲಿ ಇರುವುದಿಲ್ಲ. ಅವನು ತನ್ನ ಪ್ರೀತಿಯ ಪ್ರಾಣ ಸಹ ತ್ಯಾಗ ಮಾಡಲು ಹಿಂಜರಿಯುವುದಿಲ್ಲ.

**(ಮಲ್ಫೂಝಾತ್, ಸಂಪುಟ–1, ಪುಟ–309, 310, ಮದ್ರಣ 2018 ಖಾದಿಯಾನ್)**

ಈ ವಚನವನ್ನು ದೃಷ್ಟಿಯಲ್ಲಿರಿಸಿಕೊಂಡು ಹೇಳಬಹುದಾಗಿದೆ. ಭಾರತದ ಮುಂದಿನ ಭಾಷೆ ಉರ್ದು ಆಗಿರಬಹುದು ಮತ್ತು ಅದರ ಮುಂದೆ ಯಾವ ಭಾಷೆಗಳು ಸಹ ನಿಲ್ಲಲಾರವು.

ಸಯ್ಯುದ್‌ನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ಸೂರ: ಇಬ್ರಾಹಿಂ ವಚನ 5 **ವಮಾ ಅರ್‌ಸಲ್‌ನಾ ಮಿಂರ್‍ರಸೂಲಿನ್ ಇಲ್ಲಾ ಬಿಲಿಸಾನಿ ಖೌಮಿಹೀ ಲಿಯುಬೈಯಿನಲಹುವ್, ಫಯುಝಿಲ್ಲುಲ್ಲಾಹಿ ಮೈಯಶಾಉ ವ ಯಹ್‌ದಿ ಮೈಯಶಾಉ, ವಹುವಲ್ ಅಝೀಝುಲ್ ಹಕೀಮ್** ರ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ.

“ಇಲ್ಲಬಿಲಿಸಾನಿ ಖೌಮಿಹಿ” ಅರ್ಥಾತ್ ಕೆಲವರ ಭಾವನೆ ಏನೆಂದರೆ ಪ್ರವಾದಿಗಳಿಗೆ ಅವರ ದೇಶಿಯ ಭಾಷೆಯಲಿಯೇ ದೇವವಾಣಿ ಆಗುತ್ತದೆ ಎಂದು. ಆದರೆ ಅದು ಸರಿಯಲ್ಲ. ಹೌದು ಸರಿಯಾದುದೇನೆಂದರೆ ಅವರ ದೇಶಿಯ ಭಾಷೆಯಲ್ಲಿ ಅವಶ್ಯವಾಗಿ ದೇವವಾಣಿಯಾಗಬೇಕಾಗಿದೆ. ಏಕೆಂದರೆ ಅವರ ಸಂದೇಶ ತಮ್ಮ ದೇಶವಾಸಿಗಳಿಗೆ ತಿಳಿಸಬೇಕಾದರೆ ಇತರ ಭಾಷೆಯಲ್ಲಿ ಆದರೆ ಪ್ರಚಾರ ಕಾರ್ಯದಲ್ಲಿ ಕಠಿಣತೆ ಉಂಟಾಗುತ್ತದೆ. ಆದರೆ ದೃಷ್ಟಾಂತ ಮತ್ತು

*(ಪುಟ ಸಂಖೆ 08 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಸಹಾಬಾಗಳು ಯುದ್ಧಕ್ಕೆ ಹೇಗೆ ಹೋಗುತ್ತಿದ್ದರು ಎಂದರೆ ಅವರಿಗೆ ಯುದ್ಧದಲ್ಲಿ ಶಹೀದ್ ಆದರೆ ಅದು ಅವರಿಗೆ ನಿಜವಾದ ಪರಿಹಾರ ಹಾಗೂ ಸಾಂತ್ವಾನದ ಮೂಲವಾಗಿದೆ ಎಂದು ಭಾವಿಸುತ್ತದ್ದರು ಮತ್ತು ಅವರಿಗೆ ಯುದ್ಧದಲ್ಲಿ ಯಾವುದೇ ದುಃಖ ಎದುರಿಸಿದಾಗ, ಅವರು ಅದನ್ನು ದುಃಖ ಎಂದು ಪರಿಗಣಿಸುತ್ತಿರಲಿಲ್ಲ ಬದಲಿಗೆ ಅವರು ಅದನ್ನು ಸುಖ ಎಂದು ಭಾವಿಸುತ್ತಿದ್ದರು.

---

ಸರಿಯಾ ಬಿಅ್‌ರೆ ಮಊನಾಗೆ ಹೊರಟ ಎಲ್ಲಾ ಸಹಾಬೀಯರು ಯುವಕರಾಗಿದ್ದರು. ಪವಿತ್ರ ಖುರ್‌ಆನ್‌ನ ಖಾರಿಗಳಾಗಿದ್ದರಿಂದ ಜನರು ಅವರನ್ನು ಖುರ್ರಾ ಎಂಬ ಬಿರುದಿನಿಂದ ನೆನಪಿಸಿಕೊಳ್ಳುತ್ತಿದ್ದರು.

---

ಓ ಬಿಅ್‌ರೆ ಮಊನಾದ ಜನರೇ! ನಾನು ನಿಮ್ಮ ಮುಂದೆ ಅಲ್ಲಾಹನ ಸಂದೇಶವಾಹಕ (ಸಲ್ಲಲ್ಲಾಹು ಅಲೈಹಿವ ಸಲ್ಲಮ್) ರ ಸಂದೇಶವಾಹಕನಾಗಿ ನಿಮ್ಮ ಬಳಿಗೆ ಬಂದಿರುವೆನು. ಅಲ್ಲಾಹನ ಹೊರತುಪಡಿಸಿ ಯಾವುದೇ ದೇವರು ಇಲ್ಲ ಮತ್ತು ಮುಹಮ್ಮದ್(ಸ) ಅಲ್ಲಾಹನ ದಾಸರು ಮತ್ತು ಸಂದೇಶವಾಹಕರಾಗಿದ್ದಾರೆ ಎಂದು ನಾನು ಸಾಕ್ಷಿ ಹೇಳುತ್ತೇನೆ. ನೀವು ಕೂಡ ಅಲ್ಲಾಹ್ ಹಾಗೂ ಅವರ ಪ್ರವಾದಿ ಮುಹಮ್ಮದ್(ಸ) ಅವರ ಮೇಲೆ ವಿಶ್ವಾಸವಿಡಿ.

---

ಇಸ್ಲಾಂ ಧರ್ಮವು ಖಡ್ಗದ ಬಲದಿಂದ ವಿಜಯಶಾಲಿಯಾಗಲಿಲ್ಲ, ಬದಲಿಗೆ ಇಸ್ಲಾಂ ಧರ್ಮವು ಮನಸ್ಸಿಗೆ ಮುಟ್ಟುವ ಉನ್ನತ ಬೋಧನೆಗಳ ಮೂಲಕ ವಿಜಯಶಾಲಿಯಾಯಿತು ಮತ್ತು ನೈತಿಕತೆಯಲ್ಲಿ ಒಂದು ಉನ್ನತ ಮಟ್ಟದ ಬದಲಾವಣೆಯನ್ನು ಸೃಷ್ಟಿಸುತ್ತಿತ್ತು. (ಹಝ್ರತ್ ಮುಸ್ಲಿಹ್ ಮೌಊದ್(ರ))

---

ಹಝ್ರತ್ ಪೈಗಂಬರ್(ಸ) ಅವರಿಗೆ ಈ ಘಟನೆಗಳಿಂದ ತೀವ್ರವಾಗಿ ಆಘಾತಕ್ಕೊಳಗಾದರು, ಆದರೆ ಇಸ್ಲಾಂನಲ್ಲಿ ಯಾವುದೇ ಸಂದರ್ಭದಲ್ಲಿಯು ತಾಳ್ಮೆ ವಹಿಸಬೇಕು ಎಂದು ಬೋಧಿಸಲಾಗಿದೆ. ಹಝ್ರತ್ ಪೈಗಂಬರ್(ಸ) ಈ ಸುದ್ದಿಯನ್ನು ಕೇಳಿದ ತಕ್ಷಣ **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಎಂದು ಪಠಿಸಿ ಮೌನವಹಿಸಿದರು

---

ಹಝ್ರತ್ ಪೈಗಂಬರ್(ಸ) ಅವರಿಗೆ ಈ ಘಟನೆಗಳಿಂದ ಎಷ್ಟು ದುಃಖ ಅನುಭವಿಸಿದ್ದರು ಅದು ಕಡಿಮೆಯಾಗಿತ್ತು ಆದರೆ ಆ ಸಮಯದಲ್ಲಿ ಅವರು ರಾಜಿ ಮತ್ತು ಬಿಅ್‌ರೆ ಮಊನಾದ ರಕ್ತಸಿಕ್ತ ಕೊಲೆಗಾರರ ವಿರುದ್ಧ ಯಾವುದೇ ಯುದ್ಧ ಕ್ರಮವನ್ನು ತೆಗೆದುಕೊಳ್ಳಲಿಲ್ಲ.

---

ರಜೀಅ್ ಘಟನೆ ಮತ್ತು ಬಿಅ್‌ರ್ ಮಊನ ಘಟನೆ ಸಂಭವಿಸಿದ ನಂತರ ಒಂದು ತಿಂಗಳು ಪ್ರತಿದಿನ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸುಬ್‌ಹ್ ನಮಾಝ್‌ನಲ್ಲಿ ಅತ್ಯಂತ ದುಃಖದಿಂದ ರಅ್‌ಲ್, ಝುಕ್‌ವಾನ್, ಅಸಿಯ್ಯಾ ಮತ್ತು ಬನೂ ಲಹ್‌ಯಾನ್ ಗೋತ್ರಗಳ ಮೇಲೆ ಲಾನತ್ ಹಾಕಿದರು (ಶಪಿಸಿದರು).

**ಬಿಅ್‌ರೆ ಮಊನಾದ ಪರಿಸ್ಥಿತಿಗಳು ಹಾಗೂ ಘಟನೆಗಳ ಪ್ರಸ್ತಾವನೆ ಮತ್ತು ಫೆಲೆಸ್ತೀನಿನ ದೌರ್ಜನ್ಯ ಪೀಡಿತರಿಗೆ, ಪಾಕಿಸ್ತಾನದ ಅಹ್ಮದೀಯರಿಗೆ ಹಾಗೂ ಲೋಕದ ಸಾಮಾನ್ಯ ಸ್ಥಿತಿಗಳಿಗಾಗಿ ದುಆ ಮಾಡುವುದಾಗಿ ವಿನಂತಿ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **07-06-2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ನಾನು ಇಂದು ಪ್ರಸ್ತಾಪಿಸಲು ಹೊರಟಿರುವುದು ಸರಿಯಾ ಹಝ್ರತ್ ಮುಂಧಿರ್ ಬಿನ್ ಅಮ್ರೋ(ರ) ಅಥವಾ ಸರಿಯಾ ಬಿಅ್‌ರೆ ಮಊನ ಎಂದು ಕರೆಯಲಾಗುತ್ತದೆ. ಈ ಕ್ರೌರ್ಯತವೂ 4 ಹಿಜ್ರಿಯಲ್ಲಿ ಸಂಭವಿಸಿದೆ. ಕೆಲವರ ಪ್ರಕಾರ ಇದು ಸರಿಯಾ ರಜೀಗಿಂತ ಮೊದಲು ನಡೆದಿದೆ ಇನ್ನು ಕೆಲವರ ಪ್ರಕಾರ ರಜೀಯ ನಂತರ ನಡೆದಿದೆ. ಈ ಘಟನೆಯು ಸರಿಯಾ ರಜೀಯಂತಹ ಶತ್ರುಗಳ ಕ್ರೌರ್ಯ ಮತ್ತು ಕ್ರೂರತೆಗೆ ಅತ್ಯಂತ ಕೆಟ್ಟ ಉದಾಹರಣೆಯಾಗಿದೆ.

ಈ ಸರಿಯಾವನ್ನು ಸರಿಯಾ ಬಿಅ್‌ರೆ ಮಊನಾ ಎಂದು ಕರೆಯಲಾಗುತ್ತದೆ. ಬಿಅ್‌ರೆ ಮಊನಾವು ಮಕ್ಕಾದಿಂದ ಮದೀನಾಕ್ಕೆ ಹೋಗುವ ದಾರಿಯಲ್ಲಿರುವ ಬಾನುಸುಲೈಮ್‌ರ ಪ್ರದೇಶದಲ್ಲಿ ಒಂದು ಬಾವಿಯಾಗಿತ್ತು ಮತ್ತು ಅದೇ ಹೆಸರಿನ ಪ್ರದೇಶವೂ ಇತ್ತು. ಆದುದರಿಂದಲೇ ಅದರ ಹೆಸರು ಸರಿಯಾ ಬಿಅ್‌ರೆ ಮಊನಾ ಎಂದು ಪ್ರಸಿದ್ಧವಾಯಿತು. ಈ ಸರಿಯಾದ ನಾಯಕರು (ಅಮೀರ್) ಹಝ್ರತ್ ಮುಂಧಿರ್ ಬಿನ್ ಅಮ್ರೋ(ರ) ಆಗಿದ್ದರು, ಆದ್ದರಿಂದ ಇದನ್ನು ಸರಿಯಾ ಹಝ್ರತ್ ಮುಂದಿರ್ ಬಿನ್ ಅಮ್ರೊ(ರ) ಎಂದೂ ಕರೆಯುತ್ತಾರೆ. ಅದೇ ರೀತಿಯಲ್ಲಿ, ಇದನ್ನು ಸರಿಯತುಲ್ ಖುರ್ರಾ ಎಂದೂ ಕರೆಯುತ್ತಾರೆ.

ಸರಿಯಾ ಬಿಅ್‌ರೆ ಮಊನಾಗೆ ಹೊರಟ ಎಲ್ಲಾ ಸಹಾಬೀಯರು ಯುವಕರಾಗಿದ್ದರು. ಪವಿತ್ರ ಖುರ್‌ಆನ್‌ನ ಖಾರಿಗಳಾಗಿದ್ದರಿಂದ ಜನರು ಅವರನ್ನು ಖುರ್ರಾ ಎಂಬ ಬಿರುದಿನಿಂದ ನೆನಪಿಸಿಕೊಳ್ಳುತ್ತಿದ್ದರು. (ಸಬ್ಲುಲ್ ಹುದಾ ವರ್‌ರಶ್ಶಾದ್, ಸಂಪುಟ-6, ಪುಟ-57, ದಅರುಲ್ ಕುತುಬ್ ಇಲ್‌ಮಿಯಾ ಬೈರುತ್) (ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ-6, ಪುಟಗಳು-491, 487 ದಾರುಸ್ಸಲಾಮ್ ಸಂಶೋಧನಾ ಕೇಂದ್ರ) (ಫರ್ಹಾಂಗ್ ಸೀರತ್, ಪುಟ-69, ಝುವಾರಾ ಅಕಾಡಮಿ ಕರಾಚಿ 2003)

ಈ ಸರಿಯಾದ ಹಿನ್ನೆಲೆಗೆ ಸಂಬಂಧಿಸಿದಂತೆ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಬರೆಯುತ್ತಾರೆ: ಸುಲೈಮ್ ಮತ್ತು ಘಾತ್ಫಾನ್ ಗೋತ್ರಗಳು ..... ಈ ಗೋತ್ರಗಳು ಅರೇಬಿಯಾದ ಮಧ್ಯದಲ್ಲಿರುವ ನಜದ್ ಪ್ರಸ್ಥಭೂಮಿಯಲ್ಲಿ ವಾಸಿಸುತ್ತಿದ್ದರು ಮತ್ತು ಅವರು ಮುಸ್ಲಿಮರ ವಿರುದ್ಧ ಮಕ್ಕಾದ ಖುರೇಷಿಗಳೊಂದಿಗೆ ಪಿತೂರಿ ನಡೆಸುತ್ತಿದ್ದರು ಮತ್ತು ಕ್ರಮೇಣ ಈ ದುಷ್ಟ ಗೋತ್ರದವರ ದುಷ್ಟತನವು ಹೆಚ್ಚುತ್ತಿತ್ತು ಮತ್ತು ಇಡೀ ನಜದ್ ಪ್ರಸ್ಥಭೂಮಿಯು ಇಸ್ಲಾಮಿನ ಹಗೆತನದ ವಿಷದಿಂದ ವಿಷಪೂರಿತವಾಗುತ್ತಿತ್ತು. ಹೀಗೆ, ಅದರ ಬಗ್ಗೆ ಬರೆಯಲಾಗಿದೆ: "ನಾವು ಈಗ ಉಲ್ಲೇಖಿಸುತ್ತಿರುವ ಆ ದಿನಗಳಲ್ಲಿ, ಮಧ್ಯ ಅರೇಬಿಯಾದ ಬನೂ ಆಮಿರ್ ಗೋತ್ರದ ಮುಖ್ಯಸ್ಥನಾಗಿದ್ದ ಅಬು ಬಾರಾ ಅಮಿರಿ ಎಂಬ ವ್ಯಕ್ತಿಯು ಹಝ್ರತ್ ಪೈಗಂಬರ್(ಸ) ಅವರ ಸನ್ನಿಧಿಗೆ ಬಂದು ಭೇಟಿಯಾದನು. ಹಝ್ರತ್ ಪೈಗಂಬರ್(ಸ)ರು ಅವನಿಗೆ ಬಹಳ ಸೌಮ್ಯದಿಂದ ಹಾಗೂ ಸಹಾನುಭೂತಿಯಿಂದ ಇಸ್ಲಾಮ್ ಧರ್ಮವನ್ನು ಬೋಧಿಸಿದರು. ಆತನು ಅವರ(ಸ) ಭಾಷಣವನ್ನು ತೋರಿಕೆಯ ಆಸಕ್ತಿ ಮತ್ತು ಗಮನದಿಂದ ಆಲಿಸಿದನು ಆದರೆ ಮುಸಲ್ಮಾನನಾಗಲಿಲ್ಲ. ಆದಾಗ್ಯೂ, ಆತನು ಹಝ್ರತ್ ಪೈಗಂಬರ್(ಸ) ಅವರಿಗೆ ಹೇಳಿದನು: ನೀವು ನನ್ನೊಂದಿಗೆ ಕೆಲವು

ಸಹಾಬೀಯರನ್ನು ನಜದ್ ಕಡೆಗೆ ಅಲ್ಲಿನ ಜನರಲ್ಲಿ ಇಸ್ಲಾಂ ಧರ್ಮವನ್ನು ಬೋಧಿಸಲು ಕಳುಹಿಸಲು ವಿನಂತಿಸಿಕೊಂಡನು. ಮತ್ತು ನಜದ್‌ನ ಜನರು ಹಝ್ರತ್ ಪೈಗಂಬರ್(ಸ)ರ ಆಹ್ವಾನವನ್ನು ತಿರಸ್ಕರಿಸುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಅದಕ್ಕೆ ಹಝ್ರತ್ ಪೈಗಂಬರ್(ಸ) ನುಡಿದರು: ನಾನು ನಜದ್‌ನ ಜನರನ್ನು ನಂಬುವುದಿಲ್ಲ. ಅದಕ್ಕೆ ಅಬೂಬರಾ ಹೇಳಿದನು: ನೀವು ಇದರ ಬಗ್ಗೆ ಎಂದಿಗೂ ಚಿಂತಿಸಬೇಡಿ. ನಾನು ಅವರ ಸುರಕ್ಷತೆಗೆ ಜವಾಬ್ದಾರನಾಗಿರುತ್ತೇನೆ. ಅಬೂ ಬಾರಾ ಒಂದು ಗೋತ್ರನ ಮುಖ್ಯಸ್ಥ ಹಾಗೂ ಪ್ರಭಾವಶಾಲಿ ವ್ಯಕ್ತಿಯಾಗಿದ್ದರಿಂದ, ಹಝ್ರತ್ ಪೈಗಂಬರ್(ಸ) ಅವರಿಗೆ ತೃಪ್ತಿ ನೀಡಿದ್ದರಿಂದ ಅವರು(ಸ) ಅವನನ್ನು ನಂಬಿದರು ಮತ್ತು ನಜದ್‌ಗೆ ಸಹಾಬೀಯರ ಒಂದು ಗುಂಪನ್ನು ಕಳುಹಿಸಿದರು. ಇದು ಇತಿಹಾಸದ ವರದಿಯಾಗಿದೆ.

ಬುಖಾರಿಯಲ್ಲಿ ಹೀಗೆ ವರದಿ ಮಾಡಲಾಗಿದೆ: ರಿಅ್ಲ್ ಮತ್ತು ಝುಕ್ವಾನ್ ಇತ್ಯಾದಿ ಗೋತ್ರಗಳು (ಬನೂ ಸುಲೈಮ್‌ನ ಪ್ರಸಿದ್ಧ ಗೋತ್ರಗಳ ಶಾಖೆಯಾಗಿದ್ದವು) ಅವರಲ್ಲಿ ಕೆಲವರು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಬಂದು ಇಸ್ಲಾಮ್ ಧರ್ಮದ ಬಗ್ಗೆ ಒಲವು ತೋರಿಸಿ ನಮ್ಮ ಜನರ ನಡುವೆ ಇಸ್ಲಾಮಿನ ವೈರಿಗಳಿದ್ದಾರೆ ಅವರ ವಿರುದ್ಧ ನಮ್ಮ ಸಹಾಯಕ್ಕಾಗಿ........ ಕೆಲವು ಜನರನ್ನು ಕಳುಹಿಸಬೇಕು ಎಂದು ವಿನಂತಿಸಿಕೊಂಡರು. "ಇಲ್ಲಿ ಯಾವ ರೀತಿಯ ಸಹಾಯ ಎಂದು ತಿಳಿಸಲಿಲ್ಲ. ಆದಾಗ್ಯೂ," ಹಝ್ರತ್ ಪೈಗಂಬರ್(ಸ) ಅವರು ಈ ವಿನಂತಿಯ ಮೇರೆಗೆ ಈ ತಂಡವನ್ನು ಕಳುಹಿಸಿದರು. ದುರದೃಷ್ಟವಶಾತ್, ಬಿಅ್ರೆ ಮಊನಾದ ವಿವರಣೆಯಲ್ಲಿ, ಬುಖಾರಿಯ ವರದಿಗಳಲ್ಲಿಯು ಕೆಲವು ಗೊಂದಲಗಳು ಸಂಭವಿಸಿವೆ, ಇದರಿಂದಾಗಿ ಸತ್ಯವನ್ನು ಸಂಪೂರ್ಣವಾಗಿ ನಿರ್ಧರಿಸಲಾಗುವುದಿಲ್ಲ, ಆದರೆ ಈ ಸಂದರ್ಭದಲ್ಲಿ ರಿಅ್ಲ್ ಮತ್ತು ಝುಕ್ವಾನ್ ಇತ್ಯಾದಿ ಗೋತ್ರಗಳ ಜನರು ಹಝ್ರತ್ ಪೈಗಂಬರ್(ಸ)ರ ಸೇವೆಗೆ ಬಂದಿದ್ದರು ಮತ್ತು ಅವರು ಕೆಲವು ಸಹಾಬೀಯರನ್ನು ಕಳುಹಿಸಬೇಕೆಂದು ವಿನಂತಿಸಿದ್ದರು ಎಂದು ಖಂಡಿತವಾಗಿಯೂ ತಿಳಿಯುತ್ತದೆ. ಈ ಎರಡೂ ವರದಿಗಳನ್ನು ಸೇರಿಸಿ ಅವಲೋಕಿಸಿದಾಗ ಆಮಿರ್ ಗೋತ್ರದ ಮುಖ್ಯಸ್ಥ ಬರಾ ಬಿನ್ ಆಮಿರಿಯು ರಿಅ್ಲ್ ಹಾಗೂ ಝುಕ್ವಾನ್ ಎರಡೂ ಗೋತ್ರದ ಜನರೊಂದಿಗೆ ಸೇರಿ ಬಂದಿದ್ದನು ಮತ್ತು ಅವನು ಅವರ ಪರವಾಗಿ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಮಾತನಾಡಿರಬಹುದು ಎಂದು ತಿಳಿಯುತ್ತದೆ. ಆದ್ದರಿಂದ, ಐತಿಹಾಸಿಕ ವರದಿಗಳ ಪ್ರಕಾರ, ಹಝ್ರತ್ ಪೈಗಂಬರ್(ಸ) ಅವರು ನಜದ್‌ನ ಜನರಿಂದ ನನಗೆ ತೃಪ್ತಿಯಿಲ್ಲ ಎಂದು ಹೇಳಿದರು ಮತ್ತು ಅವನು ನೀವು ಇದರ ಬಗ್ಗೆ ಚಿಂತಿಸಬೇಡಿ ನಾನು ಅವರ ಸುರಕ್ಷತೆಗೆ ಜವಾಬ್ದಾರನಾಗಿರುತ್ತೇನೆ ಅವರಿಗೆ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ ಎಂದು ಉತ್ತರಿಸಿದನು. ಈ ಮಾತು ಸೂಚಿಸುವುದೇನೆಂದರೆ ಅಬೂಬರಾನೊಂದಿಗೆ ರಿಅ್ಲ್ ಮತ್ತು ಝುಕ್ವಾನ್‌ನ ಜನರು ಬಂದಿದ್ದರು ಆದ್ದರಿಂದ ಹಝ್ರತ್ ಪೈಗಂಬರ್(ಸ)ರವರು ಚಿಂತನೆಗೆ ಒಳಗಾದರು. (ಅಲ್ಲಾಹನು ಬಲ್ಲವನಾಗಿದ್ದಾನೆ.) ಆದಾಗ್ಯೂ, ಹಝ್ರತ್ ಪೈಗಂಬರ್(ಸ)ರವರು ಸಫರ್ 4 ಹಿಜ್ರಿಯಲ್ಲಿ ಮುಂಧಿರ್ ಬಿನ್ ಅಮ್ರ್ ಅನ್ಸಾರಿ(ರ) ಅವರ ನೇತೃತ್ವದಲ್ಲಿ ಸಹಾಬೀಯರ ಒಂದು ಗುಂಪನ್ನು ಕಳುಹಿಸಿದರು. ಈ ಜನರು ಸಾಮಾನ್ಯವಾಗಿ ಅನ್ಸಾರ್‌ಗಳಿಗೆ ಸೇರಿದವರಾಗಿದ್ದರು ಮತ್ತು ಅವರು ಎಪ್ಪತ್ತು ಸಂಖ್ಯೆಯಲ್ಲಿದ್ದರು ಮತ್ತು ಬಹುತೇಕ ಎಲ್ಲರೂ ಪವಿತ್ರ ಖುರ್‌ಆನ್‌ನ ಖಾರಿಗಳಾಗಿದ್ದರು, ಅಂದರೆ ಪವಿತ್ರ ಖುರ್‌ಆನ್ ಪಠಿಸುವವರು. (ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–517–518)

ಈ ಕುರಿತು ಓರ್ವ ಬರಹಗಾರರು ಬರೆಯುತ್ತಾರೆ: ಹಝ್ರತ್ ಪೈಗಂಬರ್(ಸ)ರಿಗೆ ಅಲ್ಲಾಹನ ಧರ್ಮವು ಇಡೀ ಜಗತ್ತಿನಲ್ಲಿ ವಿಜಯಶಾಲಿಯಾಗಿರಬೇಕು ಎಂಬ ಆಸೆ ಯಾವಾಗಲೂ ಇತ್ತು. ಎಲ್ಲಾ ಜನರು ಇಸ್ಲಾಮಿನ ನೆರಳಿನಲ್ಲಿ ಬರಬೇಕು ಮತ್ತು ಒಬ್ಬ ಅಲ್ಲಾಹನ ದಾಸತ್ವವನ್ನು ಸ್ವೀಕರಿಸಬೇಕು, ಇದರಿಂದ ಅವರು ಇಹಲೋಕ ಮತ್ತು ಪರಲೋಕದಲ್ಲಿ ಯಶಸ್ವಿಯಾಗುತ್ತಾರೆ. ಅದಕ್ಕಾಗಿಯೇ ಹಝ್ರತ್ ಪೈಗಂಬರ್(ಸ)ರವರು ಧರ್ಮದ ಬೋಧನೆ ಹಾಗೂ ಧರ್ಮದ ಕಡೆಗೆ ಕರೆಯುವ ಕರ್ತವ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದರು ಮತ್ತು ಎಲ್ಲಾ ಸಂಪನ್ಮೂಲಗಳನ್ನು ಬಳಸಲು ಮತ್ತು ಅದಕ್ಕಾಗಿ ಮಹಾನ್ ತ್ಯಾಗಗಳನ್ನು ಮಾಡಲು ಹಿಂಜರಿಯಲಿಲ್ಲ. ನಜದ್‌ನ ಅಶಿಸ್ತಿನ ಗ್ರಾಮಸ್ಥರಿಂದ ಬೆದರಿಕೆಯ ಹೊರತಾಗಿಯೂ, ಹಝ್ರತ್ ಪೈಗಂಬರ್(ಸ)ರು ಅಲ್ಲಾಹನಲ್ಲಿ ವಿಶ್ವಾಸವಿಟ್ಟರು ಮತ್ತು ಅಬೂ ಬರಾನ ಭರವಸೆಯ ಮೇರೆಗೆ ಅವರ ಬಳಿಗೆ ಸಹಾಬೀಯರ ಒಂದು ದೊಡ್ಡ ಗುಂಪನ್ನು ಕಳುಹಿಸಿದರು. ಇಸ್ಲಾಮಿನ ಕಡೆಗೆ ಕರೆ ನೀಡಲು ಹಾಗೂ ಇಸ್ಲಾಮ್ ಧರ್ಮವನ್ನು ಬೋಧಿಸುವ ಕರ್ತವ್ಯವನ್ನು ಪೂರೈಸಲು ಮತ್ತು ಇಸ್ಲಾಂ ಧರ್ಮವನ್ನು ಹರಡುವ ಪವಿತ್ರ ಕಾರ್ಯವನ್ನು ಮುನ್ನಡೆಸಲು ಅವರು(ಸ) ಅಂತಹ ದೊಡ್ಡ ಹೆಜ್ಜೆಯನ್ನು ತೆಗೆದುಕೊಂಡರು. (ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ–6, ಪುಟ 490–491, ದಾರುಸ್ಸಲಾಮ್ ಸಂಶೋಧನಾ ಕೇಂದ್ರ)

ಆದಾಗ್ಯೂ, ಸೈನ್ಯದ ಮುಖ್ಯಸ್ಥರಾದ ಹಝ್ರತ್ ಮುಂಧಿರ್ ಬಿನ್ ಅಮ್ರೋ(ರ) ಬನೂ ಸುಲೈಮ್‌ನ ನಾಯಕರಲ್ಲಿ ಒಬ್ಬರಾದ ಮುತಾಲಿಬ್ ಸುಲಿಮಾ ಅವರೊಂದಿಗೆ ಹೊರಟರು. ಅವರು ಬಿಅ್ರೆ ಮಊನಾಗೆ ತಲುಪಿ ತಮ್ಮ ಡೇರೆಗಳನ್ನು ಹಾಕಿದರು ಮತ್ತು ಹಝ್ರತ್ ಅಮ್ರು ಬಿನ್ ಉಮಯ್ಯ ಝುಮ್ರಿ(ರ) ಅವರ ನೇತೃತ್ವದಲ್ಲಿ ಮೇಯಲು ತಮ್ಮ ಜಾನುವಾರುಗಳನ್ನು ಬಿಟ್ಟರು. ಹಾರಿಸ್ ಬಿನ್ ಸಿಮ್ಮಾ(ರ) ಸಹ ಅವರೊಂದಿಗೆ ಇದ್ದರು. ಇಬ್ನ್ ಹಿಶಾಮ್ ಹಾರಿಸ್ ಬದಲಿಗೆ ಮುಂಧಿರ್ ಬಿನ್ ಮುಹಮ್ಮದ್ ಅವರ ಹೆಸರನ್ನು ಬರೆದಿದ್ದಾರೆ. (ಸಬ್ಲುಲ್ ಹುದಾ ವರ್ರಶ್ಶಾದ್, ಸಂಪುಟ–6, ಪುಟ–58, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಈ ಘಟನೆಗೆ ಸಂಬಂಧಿಸಿ ಹಝ್ರತ್ ಪೈಗಂಬರ್(ಸ) ಆಮಿರ್ ಬಿನ್ ತುಫೈಲ್‌ಗೆ ಬರೆದ ಪತ್ರದ ಬಗ್ಗೆಯೂ ಪ್ರಸ್ತಾಪಿಸಲಾಗುತ್ತಿದೆ. ಅದರ ವಿವರಣೆಯಲ್ಲಿ ಹೀಗೆ ಬರೆಯಲಾಗಿದೆ: ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ರವರು ಆಮಿರ್ ಬಿನ್ ತುಫೈಲ್‌ರ ಹೆಸರಿನಲ್ಲಿ ಸಹಾಬೀಯರ ಗುಂಪಿಗೆ ಒಂದು ಪತ್ರವನ್ನು ನೀಡಿದರು. ಇವನು ಅಬೂ ಬರಾ ಬಿನ್ ಆಮಿರ್ ಬಿನ್ ಮಾಲಿಕ್‌ನ ಸೋದರಳಿಯ ಮತ್ತು ಬನೂ ಆಮಿರ್‌ನ ಮುಖ್ಯಸ್ಥರಲ್ಲಿ ಓರ್ವ ಅಹಂಕಾರಿ ಮುಖ್ಯಸ್ಥನಾಗಿದ್ದನು. ಈತನ ವಿಷಯವೆಂದರೆ ಈ ವ್ಯಕ್ತಿಯು ತನ್ನ ಹೃದಯದಲ್ಲಿ ಹಝ್ರತ್ ಪೈಗಂಬರ್(ಸ)ರ ಸಂದೇಶದ ಸತ್ಯತೆ ಮತ್ತು ದೃಢೀಕರಣವನ್ನು ಗುರುತಿಸಿಕೊಂಡಿದ್ದನು ಮತ್ತು ಅತೀ ಶೀಘ್ರದಲ್ಲೇ ಹಝ್ರತ್ ಪೈಗಂಬರ್(ಸ)ರು ಇಡೀ ಅರೇಬಿಯಾದಲ್ಲಿ ಪ್ರಾಬಲ್ಯ ಸಾಧಿಸುತ್ತಾರೆ ಮತ್ತು ಅಧಿಕಾರವನ್ನು ಸಾಧಿಸುತ್ತಾರೆ ಎಂಬ ಅಂಶವನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದನು. ಆದರೆ ಈ ಮಧ್ಯೆ, ಅವನು ಸ್ವತಃ ತನ್ನದೇ ಆದ ಆಳ್ವಿಕೆಯ ಕನಸು ಕಾಣಲು ಪ್ರಾರಂಭಿಸಿದನು. ನಾನೇಕೆ ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋಗಿ ಮುಂಚಿತವಾಗಿ ಒಪ್ಪಂದ ಮಾಡಿಕೊಳ್ಳಬಾರದು ಎಂಬ ಈ ಪೈಶಾಚಿಕ ಆಲೋಚನೆ ಅವನ ಮನಸ್ಸಿನಲ್ಲಿ ರೂಪುಗೊಳ್ಳಲು ಪ್ರಾರಂಭಿಸಿತು. ಆದ್ದರಿಂದ ಅವನು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಬಂದು ಹೇಳಿದನು: ನಾನು ನಿಮಗೆ ಆಯ್ಕೆ ನೀಡುತ್ತೇನೆ ನೀವು ಗ್ರಾಮೀಣಪ್ರದೇಶಗಳ ಮೇಲೆ ಆಳ್ವಿಕೆ ಮಾಡಿ ಮತ್ತು ನಾನು ನಗರದ ನಿವಾಸಿಗಳ ಮೇಲೆ ಆಳ್ವಿಕೆಯನ್ನು ಮಾಡುತ್ತೇನೆ, ಅಥವಾ ನಿಮ್ಮ ನಂತರ ನಾನು ನಿಮ್ಮ ಖಲೀಫ ಮತ್ತು ಉತ್ತರಾಧಿಕಾರಿಯಾಗುತ್ತೇನೆ ಅಥವಾ ನಾನು ಗತ್‌ಫಾನ್‌ನ ಒಂದು ಸಾವಿರ ಕೆಂಪು ಮತ್ತು ಹಳದಿ ಕುದುರೆಗಳು ಮತ್ತು ಒಂದು ಸಾವಿರ ಒಂಟೆಗಳ ಹಿಂಡಿನೊಂದಿಗೆ ನಿಮ್ಮ ವಿರುದ್ಧ ಯುದ್ಧಮಾಡುತ್ತೇನೆ. ಹೀಗೆ ಅವನು ಮೂರು ಷರತ್ತುಗಳನ್ನು ನೀಡಿದನು. ಹಝ್ರತ್ ಪೈಗಂಬರ್(ಸ) ರವರು ಆಮಿರ್ ಬಿನ್ ತುಫೈಲ್‌ನ ಈ ಅಜ್ಞಾನದ ಬೇಡಿಕೆಗಳನ್ನು ತಿರಸ್ಕರಿಸಿದರು. ಏನನ್ನೂ ಕೇಳಲಿಲ್ಲ. ಅವನು ಅಸಹ್ಯದಿಂದ ಹಿಂತಿರುಗಿದನು.

ಸರಿಯಾ ಬಿಅ್ರೆ ಮಊನಾದ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ರವರು ಅವನಿಗೆ ಧರ್ಮದ ಆಹ್ವಾನವನ್ನು ನೀಡುವುದು ಸೂಕ್ತವೆಂದು ಭಾವಿಸಿದರು. ಆದ್ದರಿಂದ, ಹಝ್ರತ್ ಪೈಗಂಬರ್(ಸ)ರು ಅವರಿಗೆ ವಿಶೇಷವಾಗಿ ಪ್ರೀತಿಯ ಸಹಾಬೀಯರ ಕೈಯಲ್ಲಿ ಪತ್ರವನ್ನು ಕಳುಹಿಸಿದರು. (ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ–6, ಪುಟ 492–493, ದಾರುಸ್ಸಲಾಮ್ ಸಂಶೋಧನಾ ಕೇಂದ್ರ)

ಸೇನೆಯ ಅಮೀರ್ ಹಝ್ರತ್ ಮುಂಧಿರ್ ಬಿನ್ ಅಮ್ರೋ(ರ) ಅವರು ಹಝ್ರತ್ ಹರಾಮ್ ಬಿನ್ ಮಿಲ್‌ಹಾನ್(ರ) ಅವರನ್ನು ಹಝ್ರತ್ ಪೈಗಂಬರ್(ಸ) ಅವರ ಪತ್ರವನ್ನು ನೀಡಿ ಬನೂ ಆಮಿರ್ ಗೋತ್ರದ ಮುಖ್ಯಸ್ಥ ಆಮಿರ್ ಬಿನ್ ತುಫೈಲ್ ಅವರಿಗೆ ಕಳುಹಿಸಿದರು. (ಸಬ್ಲುಲ್ ಹುದಾ ವರ್ರಶ್ಶಾದ್, ಸಂಪುಟ–6, ಪುಟ–58, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಹರಾಮ್ ಬಿನ್ ಮಿಲ್ಹಾನ್(ರ) ಅವರು ಈ ಪತ್ರವನ್ನು ಒಯ್ಯುವ ವಿವರಣೆಯಲ್ಲಿ ಹೀಗೆ ಬರೆಯಲಾಗಿದೆ: ಹಝ್ರತ್ ಹರಾಮ್ ಬಿನ್ ಮಿಲ್ಹಾನ್(ರ) ತಮ್ಮೊಂದಿಗೆ ಇನ್ನೂ ಇಬ್ಬರು ಸಹಾಬೀಯರನ್ನು ಕರೆದೊಯ್ದರು, ಅವರಲ್ಲಿ ಒಬ್ಬರು ಒಂದು ಕಾಲಿನಿಂದ ಕುಂಟರಾಗಿದ್ದರು ಎಂದು ಬರೆಯಲಾಗಿದೆ. ಅವರ ಹೆಸರು ಕಅಬ್ ಬಿನ್ ಝೈದ್(ರ) ಎಂದಾಗಿತ್ತು. ಆದರೆ ಹೆಚ್ಚಿನ ಜೀವನಚರಿತ್ರೆಕಾರರು ಎರಡನೇ ಸಹಾಬೀಯ ಹೆಸರಿನ ಬಗ್ಗೆ ಮೌನವಾಗಿದ್ದಾರೆ, ಆದಾಗ್ಯೂ, ಬುಖಾರಿಯ ಶಾರ್ಹ್

ಫತೇಹ್ ಅಲ್–ಬಾರಿಯಲ್ಲಿ, ಅಧ್ಯಾಯದ ಗಝ್ವ ಅರ್ರಜೀನಲ್ಲಿ ಎರಡನೇಯ ಸಹಾಬೀಯು ಹೆಸರು ಮುಂಧೀರ್ ಬಿನ್ ಮುಹಮ್ಮದ್ ಎಂದು ವಿವರಿಸಲಾಗಿದೆ. ಆದಾಗ್ಯೂ, ಈ ಮೂರು ಜನರು ಹೊರಟರು. ಹಝ್ರತ್ ಹರಾಮ್(ರ) ತಮ್ಮ ಇಬ್ಬರು ಸಂಗಡಿಗರನ್ನು ಮೊದಲೇ ಹೀಗೆ ತಿಳಿಸಿದ್ದರು: ನೀವು ನನ್ನ ಸಮೀಪದಲ್ಲಿಯೇ ಇರಿ. ನಾನು ಅವರ ಬಳಿ ಹೋಗುತ್ತೇನೆ ಒಂದುವೇಳೆ ಅವರು ನನಗೆ ಅಭಯ ನೀಡಿದರೆ ಒಳ್ಳೆಯದು, ಒಂದುವೇಳೆ ಅವರು ನನ್ನನ್ನು ವಧಿಸಿದರೆ ನೀವಿಬ್ಬರೂ ನಿಮ್ಮ ಸಹಚರರ ಬಳಿಗೆ ಹಿಂದಿರುಗಿ.

(ದಾಎರಾ ಮುಆರಿಫ್, ಸೀರತ್ ಮುಹಮ್ಮದ್ ರಸುಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ, ಸಂಪುಟ–7, ಪುಟ 156, ಬಿಜ್ಮ್ ಇಕ್ಬಾಲ್, ಲಾಹೋರ್) (ಫತಹ್ ಅಲ್–ಬಾರಿ, ಸಂಪುಟ–7, ಪುಟ–448, ದಾರು ರೈಯಾನ್ ಲಿತ್ತುರಾಸುಲ್ ಖಾಹಿರಾ, 1986)

ಅದರ ನಂತರ, ಅವರು ಅಲ್ಲಾಹನ ಶತ್ರು ಆಮಿರ್ ಬಿನ್ ತುಫೈಲ್‌ನ ಬಳಿಗೆ ಹೋದರು. ಅವನು ಬನೂ ಆಮಿರ್‌ನ ಕೆಲವು ಜನರೊಂದಿಗೆ ಕುಳಿತಿದ್ದನು. ಹರಾಮ್ ಅವರೆಲ್ಲರನ್ನು ಉದ್ದೇಶಿಸಿ ಹೇಳಿದರು: ಹಝ್ರತ್ ಪೈಗಂಬರ್(ಸ)ರ ಪತ್ರವನ್ನು ತಲುಪಿಸಲು ನೀವು ನನಗೆ ಅವಕಾಶ ನೀಡುತ್ತೀರಾ? ಅದಕ್ಕೆ ಅವರು ಹೌದು ಎಂದು ಹೇಳಿದರು. ನಾವು ನಿಮಗೆ ಅಭಯ ನೀಡುತ್ತೇವೆ. ಹರಾಮ್ ಅವರೊಂದಿಗೆ ಮಾತನಾಡಲು ಪ್ರಾರಂಭಿಸಿದರು. ಮೂಸಾ ಬಿನ್ ಉಕ್ಬಾ ಅವರ ವರದಿಯಲ್ಲಿ ಹರಾಮ್ ಅವರ ಮುಂದೆ ಹಝ್ರತ್ ಪೈಗಂಬರ್(ಸ) ಅವರ ಪತ್ರವನ್ನು ಓದಲು ಪ್ರಾರಂಭಿಸಿದರು. ತಾರಿಖ್ ಅಲ್–ತಬರಿಯಲ್ಲಿ ಹರಾಮ್ ಈ ಜನರನ್ನು ಉದ್ದೇಶಿಸಿ ಹೀಗೆ ಹೇಳಿದರು:

ಓ ಬಿಅ್‌ರೆ ಮಊನಾದ ಜನರೇ! ನಾನು ನಿಮ್ಮ ಮುಂದೆ ಅಲ್ಲಾಹನ ಸಂದೇಶವಾಹಕ (ಸಲ್ಲಲ್ಲಾಹು ಅಲೈಹಿವ ಸಲ್ಲಮ್) ರ ಸಂದೇಶವಾಹಕನಾಗಿ ನಿಮ್ಮ ಬಳಿಗೆ ಬಂದಿರುವೆನು. ಅಲ್ಲಾಹನ ಹೊರತುಪಡಿಸಿ ಯಾವುದೇ ದೇವರು ಇಲ್ಲ ಮತ್ತು ಮುಹಮ್ಮದ್(ಸ) ಅಲ್ಲಾಹನ ದಾಸರು ಮತ್ತು ಸಂದೇಶವಾಹಕರಾಗಿದ್ದಾರೆ ಎಂದು ನಾನು ಸಾಕ್ಷಿ ಹೇಳುತ್ತೇನೆ. ನೀವು ಕೂಡ ಅಲ್ಲಾಹ್ ಹಾಗೂ ಅವರ ಪ್ರವಾದಿ ಮುಹಮ್ಮದ್(ಸ) ಅವರ ಮೇಲೆ ವಿಶ್ವಾಸವಿಡಿ.

ಹರಾಮ್‌ನ ಈ ಅನುಗ್ರಹದಾಯಕ ಸಂಭಾಷಣೆಯು ಇನ್ನೂ ನಡೆಯುತ್ತಿತ್ತು, ಅಲ್ಲಿ ನೆರೆದ ಜನರು ತಮ್ಮ ಆಂತರಿಕ ಕೆಡುಕನ್ನು ವ್ಯಕ್ತಪಡಿಸಿದರು. ಅವರು ತಮ್ಮ ಓರ್ವ ವ್ಯಕ್ತಿಗೆ ಸಂಕೇತವನ್ನು ನೀಡಿದರು, ಅವನು ತಕ್ಷಣವೇ ಹರಾಮ್‌ರ ಹಿಂಭಾಗಕ್ಕೆ ಹೋಗಿ ಅವರ ದೇಹದ ಮೂಲಕ ದಾಟಿ ಹೋದ ಈಟಿಯಿಂದ ಅವರನ್ನು ಹೊಡೆದು ಕೊಂದನು. ಒಂದು ವರದಿಯ ಪ್ರಕಾರ ಹರಾಮ್‌ರವರು ಪತ್ರವನ್ನು ತೆಗೆದುಕೊಂಡು ಆಮಿರ್ ಬಿನ್ ತುಫೈಲ್ ಬಳಿಗೆ ಹೋದಾಗ ಆ ದುರುಳನು ಆ ಪತ್ರವನ್ನು ನೋಡಲಿಲ್ಲ ಮತ್ತು ಅವರ ಮೇಲೆ ದಾಳಿ ಮಾಡಿ ಕೊಂದು ಹಾಕಿದನು.

(ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ–6, ಪುಟ–494, 495, ದಾರುಸ್ಸಲಾಮ್ ಸಂಶೋಧನಾ ಕೇಂದ್ರ)

ಆದಾಗ್ಯೂ, ಹಝ್ರತ್ ಹರಾಮ್(ರ) ಬರಲು ತಡವಾದಾಗ, ಮುಸ್ಲಿಮರು ಅವರನ್ನು ಹಿಂಬಾಲಿಸಿದರು. ಸ್ವಲ್ಪ ದೂರ ಹೋದ ನಂತರ ದಾಳಿ ಮಾಡಲು ಬರುತ್ತಿದ್ದ ಗುಂಪು ಎದುರಾಯಿತು. ಅವರು ಮುಸ್ಲಿಮರನ್ನು ಸುತ್ತುವರೆದರು. ಶತ್ರುಗಳೂ ಹೆಚ್ಚು ಸಂಖ್ಯೆಯಲ್ಲಿದ್ದರು. ಯುದ್ಧವು ಪ್ರಾರಂಭವಾಯಿತು ಮತ್ತು ಹಝ್ರತ್ ಪೈಗಂಬರ್(ಸ)ರ ಸಹಾಬೀಯರನ್ನು ಶಹೀದ್ ಮಾಡಲಾಯಿತು. (ಅತ್ತಬಖಾತುಲ್ ಕುಬ್ರ, ಸಂಪುಟ–2, ಪುಟ–40, ದಾರುಲ್ ಕುತುಬ್ ಇಲ್ಮಿಯಾ ಬೈರುತ್, 1990)

ಈ ಘಟನೆಯಲ್ಲಿ ಹಝ್ರತ್ ಅಬೂಬಕರ್ ವಿಮೋಚಿಸಿದ ಗುಲಾಮನಾದ ಹಝ್ರತ್ ಆಮಿರ್ ಬಿನ್ ಫುಹೈರಾ(ರ) ಎಂಬವರು ಸಹ ಶಹೀದ್ ಆದ ಬಗ್ಗೆ ಪ್ರಸ್ತಾಪಿಸಲಾಗುತ್ತಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಹಝ್ರತ್ ಅಬೂಬಕರ್(ರ) ಮದೀನಕ್ಕೆ ಹಿಜ್‌ರತ್ ಮಾಡಿದಾಗ ಹಝ್ರತ್ ಆಮಿರ್ ಬಿನ್ ಫುಹೈರಾ(ರ) ಅವರ ಜೊತೆಗಿದ್ದರು. ಅವರು ಸಹ ಬಿಅ್‌ರ್ ಮಊನದ ಘಟನೆ ಸಂದರ್ಭದಲ್ಲಿ ಶಹೀದರಾದರು. ಆ ಜನರು ಬಿಅ್‌ರೆ ಮಊನಾದಲ್ಲಿ ಕೊಲ್ಲಲ್ಪಟ್ಟಾಗ ಮತ್ತು ಹಝ್ರತ್ ಅಮ್ರ್ ಬಿನ್ ಉಮಯ್ಯ ಝುಮ್ರಿ(ರ) ಅವರನ್ನು ಬಂಧಿಸಲಾಯಿತು ಆಗ ಆಮಿರ್ ಬಿನ್ ತುಫೈಲ್ ಅವರನ್ನು ಕೇಳಿದರು ಇವರು ಯಾರು? ಮತ್ತು ಅವನು ಸತ್ತವರಲ್ಲಿ ಒಬ್ಬರನ್ನು ತೋರಿಸಿದನು, ಅಮ್ರ್ ಬಿನ್ ಉಮಯ್ಯ ಅವರು ಆಮಿರ್ ಬಿನ್ ಫುಹೈರಾ ಎಂದು ಉತ್ತರಿಸಿದರು. ಅವರ ಬಗ್ಗೆ ಆಮಿರ್ ಬಿನ್ ತುಫೈಲ್ ಹೇಳಿದ್ದಾನೆ: ನಾನು ನೋಡಿದೆ, ಆಮಿರ್ ಬಿನ್ ಫುಹೈರ ಕೊಲ್ಲಲ್ಪಟ್ಟ ನಂತರ ಅವರ ದೇಹ ಆಕಾಶಕ್ಕೆ ಎತ್ತಲ್ಪಟ್ಟಿತು. ಇವನು ಇನ್ನೂ ಮುಸ್ಲಿಮನಾಗಿರಲಿಲ್ಲ. ಆಗ ಅವನು ಆ ದರ್ಶನವನ್ನು ನೋಡಿದನು. ನಾನು ಇನ್ನೂ ಕೂಡ ಅವರು ಆಕಾಶದ ಮತ್ತು ಭೂಮಿಯ ಮಧ್ಯಭಾಗದಲ್ಲಿರುವುದಾಗಿ ನೋಡುತ್ತಿದ್ದೇನೆ. ಅನಂತರ ಅವರನ್ನು ಕೆಳಗೆ ಭೂಮಿಗೆ ಇಳಿಸಲಾಯಿತು. ಸಹಾಬರು ಕೊಲ್ಲಲ್ಪಟ್ಟ ಸಮಾಚಾರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿದಾಗ ಆ ಸಮಾಚಾರವನ್ನು ಸಹಾಬರಿಗೆ ತಿಳಿಸಲಾಯಿತು. ಹಝ್ರತ್ ಪೈಗಂಬರ್(ಸ) ಹೇಳಿದರು: ಕೊಲ್ಲಲ್ಪಟ್ಟ ಸಹಾಬರು ಹೀಗೆ ಪ್ರಾರ್ಥಿಸಿದ್ದರು – ನಮ್ಮ ಪ್ರಭೂ ನಮ್ಮ ಬಗ್ಗೆ ನಮ್ಮ ಸಹೋದರರಿಗೆ ತಿಳಿಸು. ನಾವು ನಿನ್ನ ಬಗ್ಗೆ ತೃಪ್ತರಾಗಿದ್ದೇವೆ. ನೀನು ನಮ್ಮಿಂದ ತೃಪ್ತನಾಗಿರುವೆ ಎಂದು. ಆದ್ದರಿಂದ ಸರ್ವಶಕ್ತನಾದ ಅಲ್ಲಾಹನು ಅದರ ಬಗ್ಗೆ ತಿಳಿಸಿದನು. ಇದು ಸಹೀಹ್ ಬುಖಾರಿಯ ವರದಿಯಾಗಿದೆ.

ಹಝ್ರತ್ ಆಮಿರ್ ಬಿನ್ ಫುಹೈರಾ(ರ) ಅವರನ್ನು ಶಹೀದ್ ಮಾಡಿದವರು ಯಾರು ಎಂಬುದರ ಬಗ್ಗೆ ಭಿನ್ನಾಭಿಪ್ರಾಯವಿದೆ. ಕೆಲವು ವರದಿಗಳಲ್ಲಿ, ಅವರನ್ನು ಆಮಿರ್ ಬಿನ್ ತುಫೈಲ್ ಶಹೀದ್ ಮಾಡಿದನು ಎಂದು ಹೇಳಲಾಗುತ್ತದೆ. ಇನ್ನೊಂದು ವರದಿಯಿಂದ ತಿಳಿಯುವುದೇನೆಂದರೆ ಅವರನ್ನು ಜಬ್ಬಾರ್ ಬಿನ್ ಸಲ್ಮಾ ಶಹೀದ್ ಮಾಡಿದನು ಎಂದು ತಿಳಿದುಬರುತ್ತದೆ. (ಸಹೀಹ್ ಅಲ್–ಬುಖಾರಿ, ಕಿತಾಬ್ ಅಲ್–ಮುಘಾಜಿ, ಅಧ್ಯಾಯ ಘಜ್ವ ಅರ್ರಜೀ... ಹದೀಸ್–4093) (ಅಲ್–ಇಸ್ತಿಯಾಬ್, ಸಂಪುಟ–2, ಪುಟ–796, ದಾರುಲ್ ಜೀಲ್, ಬೈರುತ್, 1992) (ಅಲ್–ಇಸ್ತಿಯಾಬ್, ಸಂಪುಟ–1, ಪುಟಗಳು 229–230, ದಾರ್ ಅಲ್–ಜೀಲ್, ಬೈರುತ್, 1992)

ಹಝ್ರತ್ ಆಮಿರ್ ಬಿನ್ ಫುಹೈರಾ(ರ) ಅವರ ಶಹಾದತ್‌ನ್ನು ಉಲ್ಲೇಖಿಸಿ, ಹಝ್ರತ್ ಮುಸ್ಲೆಹ್ ಮೌಊದ್(ರ) ಬರೆಯುತ್ತಾರೆ: ಇಸ್ಲಾಂ ಧರ್ಮವು ಖಡ್ಗದ ಬಲದಿಂದ ವಿಜಯಶಾಲಿಯಾಗಲಿಲ್ಲ, ಬದಲಿಗೆ ಇಸ್ಲಾಂ ಧರ್ಮವು ಮನಸ್ಸಿಗೆ ಮುಟ್ಟುವ ಉನ್ನತ ಬೋಧನೆಗಳ ಮೂಲಕ ವಿಜಯಶಾಲಿಯಾಯಿತು ಮತ್ತು ನೈತಿಕತೆಯಲ್ಲಿ ಒಂದು ಉನ್ನತ ಮಟ್ಟದ ಬದಲಾವಣೆಯನ್ನು ಸೃಷ್ಟಿಸುತ್ತಿತ್ತು.

ಓರ್ವ ಸಹಾಬಿ ಹೇಳುತ್ತಾರೆ: ನಾನು ಮುಸಲ್ಮಾನನಾಗಲು ಕಾರಣವಾದ ವಿಷಯವೇನೆಂದರೆ ನಾನು ಒಮ್ಮೆ ದ್ರೋಹದಿಂದ ಮುಸ್ಲಿಮರ ಎಪ್ಪತ್ತು ಖಾರಿಗಳನ್ನು ಶಹೀದ್ ಮಾಡಿದ ಸಮುದಾಯದಲ್ಲಿ ಅತಿಥಿಯಾಗಿ ಉಳಿದುಕೊಂಡಿದ್ದೆ. ಅವರು ಮುಸ್ಲಿಮರ ಮೇಲೆ ದಾಳಿ ಮಾಡಿದಾಗ, ಕೆಲವರು ಎತ್ತರದ ದಿಬ್ಬಗಳನ್ನು ಹತ್ತಿದರು ಮತ್ತು ಕೆಲವರು ಅವರ ವಿರುದ್ಧ ನಿಂತರು. ಶತ್ರುಗಳು ಬಹಳ ದೊಡ್ಡ ಸಂಖ್ಯೆಯಲ್ಲಿದ್ದರು ಮತ್ತು ಮುಸ್ಲಿಮರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದರು ಮತ್ತು ಬಹಳ ದೌರ್ಬಲ್ಯ ಸ್ಥಿತಿಯಲ್ಲಿದ್ದರು ಆದ ಕಾರಣ ಅವರು ಒಬ್ಬೊಬ್ಬರಾಗಿ ಮುಸ್ಲಿಮರನ್ನು ಶಹೀದ್ ಮಾಡಿದರು. ಕೊನೆಯಲ್ಲಿ, ಹಝ್ರತ್ ಪೈಗಂಬರ್(ಸ) ರೊಂದಿಗೆ ಹಿಜ್ರತ್‌ನಲ್ಲಿ ಭಾಗವಹಿಸಿದ ಮತ್ತು ಹಝ್ರತ್ ಅಬೂಬಕರ್(ರ) ಅವರ ವಿಮೋಚಿಸಿದ ಗುಲಾಮನಾಗಿದ್ದ ಒಬ್ಬ ಸಹಾಬಿ ಮಾತ್ರ ಉಳಿದಿದ್ದರು, ಅವರ ಹೆಸರು ಆಮಿರ್ ಬಿನ್ ಫುಹೈರಾ(ರ). ಅನೇಕ ಜನರು ಒಟ್ಟಾಗಿ ಅವರನ್ನು ಹಿಡಿದರು ಮತ್ತು ಒಬ್ಬ ವ್ಯಕ್ತಿಯು ಅವರ ಎದೆಗೆ ಬಹಳ ಬಲದಿಂದ ಈಟಿಯನ್ನು ಹಾಕಿದನು. ಅವರಿಗೆ ಈಟಿ ಹೊಡೆದಂತೆಯೇ ಅವರ ನಾಲಗೆಯಿಂದ ಈ ಮಾತುಗಳು ಹೊರಟುವು **ಅಲ್ಲಾಹು ಅಕ್‌ಬರ್ ಫುಝ್‌ತು ವರಬ್ಬಿಲ್ ಕಅಬ**. ಅಲ್ಲಾಹು ಅಕ್‌ಬರ್ ಕಅಬದ ಪ್ರಭುವಿನಾಣೆ ನಾನು ಜಯಶಾಲಿ ಆದೆನು. ಆ ಸಮಯದಲ್ಲಿ ಮುಸ್ಲಿಮನಲ್ಲದ ಈ ನಿರೂಪಕರು ಬರೆಯುತ್ತಾರೆ, ನಾನು ಅವನ ನಾಲಿಗೆಯಿಂದ ಈ ಪದಗಳನ್ನು ಆಲಿಸಿದಾಗ, ನಾನು ಆಶ್ಚರ್ಯಚಕಿತನಾಗಿ ಹೇಳಿದೆ: ಈ ವ್ಯಕ್ತಿಯು ತನ್ನ ಸಂಬಂಧಿಕರಿಂದ ದೂರವಾಗಿದ್ದಾನೆ, ಅವನ ಹೆಂಡತಿ ಮತ್ತು ಮಕ್ಕಳಿಂದ ದೂರವಾಗಿದ್ದಾನೆ, ಅವನು ಬಹಳ ಸಂಕಟದಲ್ಲಿದ್ದಾನೆ ಮತ್ತು ಅವನ ಎದೆಗೆ ಈಟಿ ಹೊಡೆಯಲಾಗಿದೆ, ಆದರೆ ಸಾಯುತ್ತಿರುವಾಗ ಅವನು ಏನಾದರೂ ಹೇಳಿದರೆ, ಅದು ಕೇವಲ, ಅಲ್ಲಾಹು ಅಕ್‌ಬರ್ ಕಅಬದ ಪ್ರಭುವಿನಾಣೆ ನಾನು ಜಯಶಾಲಿ ಆದೆನು. ಇವನೇನು ಹುಚ್ಚನೇ? ಹಾಗಾಗಿ, "ನಾನು ಬೇರೆ ಕೆಲವರನ್ನು ಕೇಳಿದೆ, ಇದು ಏನು? ಮತ್ತು ಅವರ ಬಾಯಿಂದ ಅಂತಹ ಮಾತುಗಳು ಏಕೆ ಬಂತು? ಅದಕ್ಕೆ ಅವರು ಹೇಳಿದರು: ನಿಮಗೆ ತಿಳಿದಿಲ್ಲ ಈ ಮುಸ್ಲಿಮರು ಹೀಗೆ ಹುಚ್ಚರಾಗಿದ್ದಾರೆ. ಅವರು ದೇವರ ಮಾರ್ಗದಲ್ಲಿ ಕೊಲ್ಲಲ್ಪಟ್ಟಾಗ, ದೇವರು ಅವರಿಂದ ಸಂತೋಷಪಡುತ್ತಾನೆ ಮತ್ತು ಅವರು ಯಶಸ್ಸನ್ನು ಸಾಧಿಸಿದ್ದಾರೆ ಎಂದು ಅವರು ಭಾವಿಸುತ್ತಾರೆ. ಇದರ ಪರಿಣಾಮ ನನ್ನ ಮೇಲೆ ಎಷ್ಟರ ಮಟ್ಟಿಗೆ ಬೀರಿತು ಎಂದರೆ ನಾನು ಈ ಜನರ ಕೇಂದ್ರಕ್ಕೆ ಭೇಟಿ ನೀಡಿ ಅವರ ಧರ್ಮವನ್ನು ಅಧ್ಯಯನ ಮಾಡುತ್ತೇನೆ ಎಂದು ಯೋಚಿಸಿದೆ. ಮುಂದೆ ಅವರು ಹೇಳುತ್ತಾರೆ: ನಾನು

ಮದೀನಾವನ್ನು ತಲುಪಿ ಮುಸಲ್ಮಾನನಾದೆ. ಈ ಘಟನೆಯ ಬಗ್ಗೆ ಸಹಾಬೀಯರು ಹೇಳುತ್ತಾರೆ: ಒಬ್ಬ ವ್ಯಕ್ತಿಯ ಎದೆಗೆ ಈಟಿಯಿಂದ ಹೊಡೆಯಲಾಗುತ್ತದೆ ಆತನು ತನ್ನ ತಾಯ್ನಾಡಿನಿಂದ ದೂರವಿದ್ದಾನೆ. ಅವನೊಂದಿಗೆ ಯಾವುದೇ ಪ್ರೀತಿಪಾತ್ರರು ಅಥವಾ ಸಂಬಂಧಿಕರು ಇಲ್ಲ, ಮತ್ತು ಅವನ ನಾಲಿಗೆಯಿಂದ ಕೇವಲ **ಅಲ್ಲಾಹು ಅಕ್‌ಬರ್ ಘುಝ್ತು ವರಬ್ಬಿಲ್ ಕಅಬ.** ಎಂಬ ಪದಗಳು ಹೊರಟುತ್ತವೆ. ಆ ಪದಗಳ ಸ್ವಭಾವವು ಅವರ ಮೇಲೆ ಎಷ್ಟು ಪ್ರಭಾವ ಬೀರಿದೆ ಎಂದರೆ ಅವರು ಈ ಘಟನೆಯನ್ನು ವಿವರಿಸಲು ಆ ಪದಗಳನ್ನು ಬಳಸಿದಾಗ ಈ ಘಟನೆಯ ಭಯಾನಕತೆಯ ಕಾರಣದಿಂದಾಗಿ ಅವರ ದೇಹವು ನಡುಗಲು ಪ್ರಾರಂಭಿಸುತ್ತಿತ್ತು ಮತ್ತು ಅವರ ಕಣ್ಣುಗಳಿಂದ ನೀರು ಹರಿಯುತ್ತಿತ್ತು.

ಹಾಗಾಗಿ ಇಸ್ಲಾಂ ಧರ್ಮವು ಅದರ ಸದ್ಗುಣಗಳಿಂದಾಗಿ ಹರಡಿತು. (ಸೈರೆ ರೂಹಾನಿ, ಅನ್ವಾರುಲ್ ಉಲೂಮ್, ಸಂಪುಟ–22, ಪುಟ 250–251)

ಹಝ್ರತ್ ಆಮಿರ್ ಬಿನ್ ಫುಹೈರಾ(ರ) ಹುತಾತ್ಮರಾದ ಸಮಯದಲ್ಲಿ ಅವರ ಬಾಯಿಂದ ಹೊರಬಂದ ಪದಗಳಲ್ಲಿ **ಘುಝ್ತು ವರಬ್ಬಿಲ್ ಕಅಬ** ಮತ್ತು **ಘುಝ್ತು ಅಲ್ಲಾಹಿ** ಎಂಬ ಎರಡೂ ಪದಗಳು ಸಿಗುತ್ತವೆ. ಎರಡೂ ರೀತಿಯ ವರದಿಗಳಿವೆ ಮತ್ತು ಈ ಪದಗಳು ಬೇರೆ ಸಹಾಬೀಯರ ನಾಲಿಗೆಯಿಂದಲೂ ಹೊರಬಂದಿದ್ದವು. ಹೀಗಾಗಿ, ಈ ಕುರಿತು ಹಝ್ರತ್ ಮುಸ್ಲಿಹ್ ಮೌಊದ್(ರ) ಪ್ರಸ್ತಾಪಿಸಿದ್ದಾರೆ. ಅವರು(ರ) ಹೇಳುತ್ತಾರೆ: ನಾವು ಇತಿಹಾಸವನ್ನು ಅಧ್ಯಾಯನ ಮಾಡಿದಾಗ ನಮಗೆ ತಿಳಿದು ಬರುವುದೇನೆಂದರೆ ಸಹಾಬಾಗಳು ಯುದ್ಧಕ್ಕೆ ಹೇಗೆ ಹೋಗುತ್ತಿದ್ದರು ಎಂದರೆ ಅವರಿಗೆ ಯುದ್ಧದಲ್ಲಿ ಶಹೀದ್ ಆದರೆ ಅದು ಅವರಿಗೆ ನಿಜವಾದ ಪರಿಹಾರ ಹಾಗೂ ಸಾಂತ್ವನದ ಮೂಲವಾಗಿದೆ ಎಂದು ಭಾವಿಸುತ್ತಿದ್ದರು ಮತ್ತು ಅವರಿಗೆ ಯುದ್ಧದಲ್ಲಿ ಯಾವುದೇ ದುಃಖ ಎದುರಿಸಿದಾಗ, ಅವರು ಅದನ್ನು ದುಃಖ ಎಂದು ಪರಿಗಣಿಸುತ್ತಿರಲಿಲ್ಲ ಬದಲಿಗೆ ಅವರು ಅದನ್ನು ಸುಖ ಎಂದು ಎಂದು ಭಾವಿಸುತ್ತಿದ್ದರು. ಆದುದರಿಂದ ದೇವಮಾರ್ಗದಲ್ಲಿ ಹತರಾದ ಸಮಾಧಾನವನ್ನು ಅನುಭವಿಸಿದ ಸಂಗಡಿಗರ ಬಾಹುಳ್ಯವಿರುವ ಇಂತಹ ಘಟನೆಗಳು ಇತಿಹಾಸಗಳಲ್ಲಿ ಕಂಡುಬರುತ್ತವೆ.

ಉದಾಹರಣೆಗೆ, ಮಧ್ಯ ಅರೇಬಿಯಾದ ಒಂದು ಗೋತ್ರಕ್ಕೆ ಬೋಧಿಸಲು ಹಝ್ರತ್ ಪೈಗಂಬರ್(ಸ) ಅವರಿಂದ ಕಳುಹಿಸಲ್ಪಟ್ಟ ಹರಾಮ್ ಬಿನ್ ಮಿಲ್ಹಾನ್(ರ) ಇಸ್ಲಾಂ ಧರ್ಮದ ಸಂದೇಶವನ್ನು ಆಮಿರ್ ಗೋತ್ರದ ಮುಖ್ಯಸ್ಥ ಆಮಿರ್ ಬಿನ್ ತುಫೈಲ್‌ನ ಕಡೆಗೆ ತೆಗೆದುಕೊಂಡು ಹೋದರು ಮತ್ತು ಉಳಿದ ಸಹಾಬೀಯರು ಹಿಂದೆ ಉಳಿದರು. ಆರಂಭದಲ್ಲಿ ಆಮಿರ್ ಬಿನ್ ತುಫೈಲ್ ಕಾಪಟ್ಯದಿಂದ ಅವರನ್ನು ಸ್ವಾಗತಿಸಿದನು. ಆದರೆ ಹಝ್ರತ್ ಹರಾಮ್ ಬಿನ್ ಮಲ್‌ಹಾನ್(ರ) ತಬ್ಲೀಗ್ ಮಾಡಲು ಪ್ರಾರಂಭಿಸಿದಾಗ ಅಲ್ಲಿ ಹಾಜರಿದ್ದವರು ತಮ್ಮ ನೀಚತನವನ್ನು ಪ್ರಕಟಪಡಿಸುತ್ತಾ ಆ ನಿಷ್ಕಳಂಕ ದೂತನನ್ನು ಹಿಂಬಾಗದಿಂದ ಈಟಿಯಿಂದ ತಿವಿದು ಕೊಂದರು. ಆಗ ಹಝ್ರತ್ ಹರಾಮ್ ಬಿನ್ ಮಲ್‌ಹಾನ್(ರ)ರ ನಾಲಗೆಯಿಂದ ಈ ಮಾತುಗಳು ಹೊರಟುವು **ಅಲ್ಲಾಹು ಅಕ್‌ಬರ್ ಘುಝ್ತು ವರಬ್ಬಿಲ್ ಕಅಬ.** ಅಲ್ಲಾಹು ಅಕ್‌ಬರ್ ಕಅಬದ ಪ್ರಭುವಿನಾಣೆ ನಾನು ಜಯಶಾಲಿ ಆದೆನು. ನಂತರ ಈ ದುಷ್ಟರು ಉಳಿದ ಸಹಾಬೀಯರನ್ನು ಮುತ್ತಿಗೆ ಹಾಕಿ ದಾಳಿ ಮಾಡಿದರು. ಈ ಸಂದರ್ಭದಲ್ಲಿ, ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಹಿಜ್ರತ್ ಪ್ರಯಾಣದಲ್ಲಿ ಇದ್ದ ಹಝ್ರತ್ ಅಬೂಬಕರ್(ರ) ಅವರ ಗುಲಾಮ ಆಮಿರ್ ಬಿನ್ ಫುಹೈರಾ(ರ) ಬಗ್ಗೆ ಉಲ್ಲೇಖಿಸಲಾಗಿದೆ ಬದಲಿಗೆ ಸ್ವತಃ ಅವರನ್ನು ವಧಿಸಿದವನು ಹೇಳುತ್ತಾರೆ: ನಾನು ಆಮಿರ್ ಬಿನ್ ಫುಹೈರಾ(ರ) ಅವರನ್ನು ಶಹೀದ್ ಮಾಡಿದಾಗ ಅವರ ನಾಲಿಗೆಯಿಂದ **ಘುಝ್ತು ವಲ್ಲಾಹಿ** ಅಂದರೆ: ಅಲ್ಲಾಹನ ಆಣೆ!! ನಾನು ವಿಜಯಶಾಲಿಯಾದೆನು ಎಂಬ ಪದಗಳು ಹೊರಬಂದವು. ಈ ಘಟನೆಗಳು ಸಹಾಬೀಯರಿಗೆ ಮರಣವು ದುಃಖಕ್ಕಿಂತ ಹೆಚ್ಚಾಗಿ ಸಂತೋಷದ ಮೂಲವಾಗಿದೆ ಎಂದು ತೋರಿಸುತ್ತದೆ. (ಏಕ್ ಆಯತ್ ಕೀ ಪುರ್ ಮುಆರಿಫ್ ತಫ್ಸೀರ್, ಅನ್ವಾರುಲ್ ಉಲೂಮ್, ಸಂಪುಟ–18, ಪುಟ–612–613)

ಹಝ್ರತ್ ಆಮಿರ್ ಬಿನ್ ಫುಹೈರಾ(ರ) ಅವರನ್ನು ಶಹೀದ್ ಮಾಡಿದ ಜಬ್ಬಾರ್ ಬಿನ್ ಸಲ್ಮಾ ಅವರು ನಂತರ ಉಸಲ್ಮಾನರಾದರು ಅವರು ಹೇಳುತ್ತಾರೆ: ನನ್ನನ್ನು ಇಸ್ಲಾಮ್ ಕಡೆಗೆ ಆಕರ್ಷಿಸಿದುದು ಏನೆಂದರೆ ನಾನು ಆಮಿರ್ ಬಿನ್ ಫುಹೈರಾರನ್ನು ಶಹೀದರನ್ನಾಗಿ ಮಾಡಿದಾಗ ಅವರ ಬಾಯಿಯಿಂದ ತಾನಾಗಿ ಈ ಶಬ್ದಗಳು ಹೊರಬಂದುವು. **ಘುಝ್ತು ವರಬ್ಬಿಲ್ ಕಅಬ** ಕಅಬದ ಪ್ರಭುವಿನ ಆಣೆ ನಾನು ಜಯಶಾಲಿ ಆದೆನು. ಈ ಮಾತುಗಳು ನನ್ನ ಹೃದಯದೊಳಗೆ ಇಳಿದುವು. ಈ ಮಾತಿನ ಅರ್ಥ ಏನೆಂದು ನಾನು ಯೋಚಿಸ ತೊಡಗಿದೆ. ಮತ್ತು ಅವರು ಯಾವ ಯಶಸ್ಸನ್ನು ಪಡೆದರು? ನಾನು ಅವರನ್ನು ಕೊಂದಿದ್ದೇನೆ.

ನಾನು ಅದೇ ಆರು ಮತ್ತು ಐದರಲ್ಲಿ ಓರ್ವ ವ್ಯಕ್ತಿ ಝಹಾಕ್ ಬಿನ್ ಸುಫ್ಯಾನ್ ಕಿಲಾಬಿ ಎಂಬ ಮುಸ್ಲಿಂ ವ್ಯಕ್ತಿಯ ಬಳಿಗೆ ಹೋಗಿ ಅವರ ಆ ಪದಗಳ ಅರ್ಥವನ್ನು ಕೇಳಿದೆ. ಅದಕ್ಕೆ ಅವರು ಹೇಳಿದರು ಈ ಯಶಸ್ಸು ಎಂದರೆ ಸ್ವರ್ಗ ಸಿಗುತ್ತದೆ ಎಂದರ್ಥ. ಇದನ್ನು ಕೇಳಿದ ನಂತರ ನಾನು, **"**ಅಲ್ಲಾಹನ ಆಣೆ! ಅವರು ಯಶಸ್ವಿಯಾದರು ಮತ್ತು ಅದೇ ಸಮಯದಲ್ಲಿ ಅವರು ನನ್ನನ್ನು ಇಸ್ಲಾಂ ಧರ್ಮವನ್ನು ಸ್ವೀಕರಿಸಲು ಆಹ್ವಾನಿಸಿದರು, ಹಾಗಾಗಿ ನಾನು ಇಸ್ಲಾಂ ಧರ್ಮವನ್ನು ಸ್ವೀಕರಿಸಿದೆ. (ಅಸ್‌ದ್ುಲ್ ಗಾಬಾಹ್, ಸಂಪುಟ–1, ಪುಟ 504–505, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ–6, ಪುಟಗಳು 502–503, ದಾರುಸ್ಸಲಾಮ್ ಸಂಶೋಧನಾ ಕೇಂದ್ರ)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಈ ಸರಿಯಾ ಬಿಅ್‌ರೆ ಮಊನಾದ ಬಗ್ಗೆ ಬರೆಯುತ್ತಾರೆ: ಈ ಜನರು ಒಂದು ಬಾವಿಯ ಕಾರಣದಿಂದ ಬಿಅ್‌ರೆ ಮಊನಾ ಎಂದು ಕರೆಯಲ್ಪಡುವ ಸ್ಥಳಕ್ಕೆ ತಲುಪಿದಾಗ, ಆ ಜನರಲ್ಲಿ ಒಬ್ಬರಾದ ಹರಾಮ್ ಬಿನ್ ಮಿಲ್ಹಾನ್(ರ) ಅವರು ಅನಸ್ ಬಿನ್ ಮಾಲಿಕ್ ಅವರ ಚಿಕ್ಕಪ್ಪರಾಗಿದ್ದರು. ಹಝ್ರತ್ ಪೈಗಂಬರ್(ಸ) ರಿಂದ ಇಸ್ಲಾಂಗೆ ಆಹ್ವಾನದ ಸಂದೇಶವನ್ನು ಪಡೆದು ಅವರು ಆಮಿರ್ ಗೋತ್ರದ ಮುಖ್ಯಸ್ಥ ಮತ್ತು ಅಬು ಬಾರಾ ಆಮಿರಿಯ ಸೋದರಳಿಯ ಆಮಿರ್ ಬಿನ್ ತುಫೈಲ್‌ನ ಬಳಿಗೆ ಹೋದರು ಉಳಿದ ಸಹಬೀಯರು ಅವರ ಹಿಂದೆ ಉಳಿದರು. ಹರಾಮ್ ಬಿನ್ ಮಿಲ್ಹಾನ್(ರ) ಆಮಿರ್ ಬಿನ್ ತುಫೈಲ್ ಮತ್ತು ಅವನ ಸಂಗಡಿಗರನ್ನು ಪ್ರವಾದಿಯ ಸಂದೇಶವಾಹಕರಾಗಿ ತಲುಪಿದಾಗ, ಆರಂಭದಲ್ಲಿ ಆಮಿರ್ ಬಿನ್ ತುಫೈಲ್ ಕಾಪಟ್ಯದಿಂದ ಅವರನ್ನು ಸ್ವಾಗತಿಸಿದನು. ಆದರೆ ಹಝ್ರತ್ ಹರಾಮ್ ಬಿನ್ ಮಲ್‌ಹಾನ್(ರ) ತಬ್ಲೀಗ್ ಮಾಡಲು ಪ್ರಾರಂಭಿಸಿದಾಗ ಅಲ್ಲಿ ಹಾಜರಿದ್ದವರು ತಮ್ಮ ನೀಚತನವನ್ನು ಪ್ರಕಟಪಡಿಸುತ್ತಾ ಆ ನಿಷ್ಕಳಂಕ ದೂತನನ್ನು ಹಿಂಬಾಗದಿಂದ ಈಟಿಯಿಂದ ತಿವಿದು ಕೊಂದರು. ಆಗ ಹಝ್ರತ್ ಹರಾಮ್ ಬಿನ್ ಮಲ್‌ಹಾನ್(ರ)ರ ನಾಲಗೆಯಿಂದ ಈ ಮಾತುಗಳು ಹೊರಟುವು **ಅಲ್ಲಾಹು ಅಕ್‌ಬರ್ ಘುಝ್ತು ವರಬ್ಬಿಲ್ ಕಅಬ.** ಅಲ್ಲಾಹು ಅಕ್‌ಬರ್ ಕಅಬದ ಪ್ರಭುವಿನಾಣೆ ನಾನು ಜಯಶಾಲಿ ಆದೆನು. ಆಮಿರ್ ತನ್ನ ಗೋತ್ರದ ಜನರನ್ನು ಉತ್ತೇಜಿಸಿ ಅಲ್ಲಿದ್ದ ಇತರ ಮುಸ್ಲಿಮರನ್ನು ಹತ್ಯೆ ಮಾಡಲು ಹೇಳಿದನು. ಆದರೆ ಆತನ ಮಾತಿಗೆ ಅವರು ಒಪ್ಪಲಿಲ್ಲ. ಆಗ ಆಮಿರ್ ಸುಲೈಮ್ ಗೋತ್ರದ ರಅ್‌ಲ್, ಝಕ್ವಾನ್ ಮತ್ತು ಅಸಿಯ್ಯರೊಂದಿಗೆ ಸೇರಿಕೊಂಡು ನಿರಪರಾಧಿಗಳೂ ನಿರಾಯುಧರೂ ಆದ ಆ ಮುಸ್ಲಿಮರ ಗುಂಪನ್ನು ಆಕ್ರಮಣ ಮಾಡಿದನು. ಮುಸ್ಲಿಮರು ಆ ಅನಾಗರಿಕ ಕ್ರೂರಿಗಳೊಂದಿಗೆ ಹೇಳಿದರು: ನಮಗೆ ನಿಮ್ಮೊಂದಿಗೆ ಯಾವ ಹಗೆತನವೂ ಇಲ್ಲ. ನಾವು ಒಂದು ನಿಗದಿತ ಕೆಲಸಕ್ಕೋಸ್ಕರ ಬಂದಿದ್ದೇವೆ. ಆದರೆ ಅವರ ಮಾತನ್ನು ಗಮನಿಸದೆ ಶತ್ರುಗಳು ಎಲ್ಲರನ್ನೂ ಕೊಂದರು. (ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಃಇಬ್ ಎಂ.ಎ, ಪುಟ–518–519) ಶತ್ರುಗಳು ಯಾವಾಗಲೂ ಈ ರೀತಿಯೇ ವರ್ತಿಸುತ್ತಾರೆ.

ಬಿಅ್‌ರೆ ಮಊನಾದ ಶಹೀದರ ಬಗ್ಗೆ ಹೀಗೆ ಬರೆಯಲಾಗಿದೆ: ಈ ಸರಿಯಾದಲ್ಲಿ ಹಝ್ರತ್ ಅಮ್ರು ಬಿನ್ ಉಮಯ್ಯ ಝುಮ್ರಿ(ರ) ಮತ್ತು ಕಅಬ್ ಬಿನ್ ಝೈದ್(ರ) ಹೊರತುಪಡಿಸಿ ಉಳಿದ ಎಲ್ಲ ಸಹಾಬೀಯರು ಶಹೀದ್ ಆಗಿದ್ದರು ಎಂದು ಮುಘಾಜಿಯ ಜನರು ಒಪ್ಪುತ್ತಾರೆ. ಹಝ್ರತ್ ಕಅಬ್ ಬಿನ್ ಝೈದ್(ರ) ಅವರು ಬಿಅ್‌ರೆ ಮಊನಾದ ದಿನದಂದು ಗಾಯಗೊಂಡರು ಮತ್ತು ಖಂದಕದ ದಿನದಂದು ನಿಧನರಾದರು ಮತ್ತು ಹಝ್ರತ್ ಅವ್ಸ್ ಬಿನ್ ಉಮಯ್ಯ(ರ) ಅವರು ಮುಆವಿಯಾರ ಆಳ್ವಿಕೆಯಲ್ಲಿ ನಿಧನರಾದರು. ಈ ಘಟನೆಯಲ್ಲಿ ಸೇರಿದ ಎಲ್ಲ ಸಹಾಬರ ಹೆಸರು ಜೀವನ ಚರಿತ್ರೆ ಗ್ರಂಥಗಳಲ್ಲಾಗಲಿ ಇತರ ಚರಿತ್ರೆ ಗ್ರಂಥಗಳಲ್ಲಾಗಲೀ ಉಲ್ಲೇಖಿತವಾಗಿಲ್ಲ. ಅಂದಾಜು 29 ಸಹಾಬರ ಹೆಸರು ಮಾತ್ರ ದಾಖಲಿಸಲ್ಪಟ್ಟಿದೆ. ಈ ಸಮಯದಲ್ಲಿ ನಾನು ಆ ಹೆಸರನ್ನು ತೆಗೆದುಕೊಳ್ಳುವುದಿಲ್ಲ. ಅದು ಪ್ರಕಟವಾದಾಗ ಅಲ್ಲಿಯೇ ನಮೂದಿಸಲಾಗುತ್ತದೆ. ದೊಡ್ಡ ಪಟ್ಟಿಯೇ ಇದೆ. ಈ ಇಪ್ಪತ್ತೊಂಬತ್ತು ಹೆಸರುಗಳು ಹೀಗಿವೆ:

1. ಹಝ್ರತ್ ಅಮೀರ್ ಬಿನ್ ಫುಹೈರಾ(ರ), 2. ಹಝ್ರತ್ ಹಕಮ್ ಬಿನ್ ಕೈಸನ್(ರ) 3. ಹಝ್ರತ್ ಮುಂಧಿರ್ ಬಿನ್ ಮುಹಮ್ಮದ್(ರ), 4. ಹಝ್ರತ್ ಅಬು ಉಬೈದ್ ಬಿನ್ ಅಮ್ರೋ(ರ), 5. ಹಝ್ರತ್ ಹಾರಿಸ್ ಬಿನ್ ಸಿಮ್ಮಹ್(ರ), 6. ಹಝ್ರತ್ ಉಬೈ ಬಿನ್ ಮುಆಝ್(ರ), 7. ಹಝ್ರತ್ ಅನಸ್ ಬಿನ್ ಮುಆಝ್(ರ), 8. ಹಝ್ರತ್ ಅಬು ಶೇಖ್ ಬಿನ್ ಅಬಿ ಸಾಬಿತ್(ರ), 9. ಹಝ್ರತ್ ಹರಮ್ ಬಿನ್

ಮಿಲ್ಹಾನ್(ರ), 10. ಹಝ್ರತ್ ಸುಲೈಮ್ ಬಿನ್ ಮಿಲ್ಹಾನ್(ರ), 11. ಹಝ್ರತ್ ಸುಫ್ಯಾನ್ ಬಿನ್ ಸಾಬಿತ್(ರ), 12. ಮಾಲಿಕ್ ಬಿನ್ ಸಾಬಿತ್(ರ), 13. ಹಝ್ರತ್ ಉರ್ವಾ ಬಿನ್ ಅಸ್ಮಾ ಬಿನ್ ಸಲಾತ್(ರ), 14. ಹಝ್ರತ್ ಖುತ್ಬ ಬಿನ್ ಅಬ್ದ್ ಅಮ್ರೋ(ರ), 15. ಹಝ್ರತ್ ಮುಂಧಿರ್ ಬಿನ್ ಉಮರ್(ರ), 17. ಹಝ್ರತ್ ಮುಆಝ್ ಬಿನ್ ಮಾಯಿಸ್(ರ), 18. ಹಝ್ರತ್ ಮಸ್ಊದ್ ಬಿನ್ ಸಾದ್(ರ), 19. ಹಝ್ರತ್ ಖಾಲಿದ್ ಬಿನ್ ಸಾಬಿತ್(ರ), 20. ಹಝ್ರತ್ ಸುಫ್ಯಾನ್ ಬಿನ್ ಹಾತಿಬ್(ರ), 21. ಹಝ್ರತ್ ಸಾದ್ ಬಿನ್ ಅಮ್ರೋ(ರ), 22. ಹಝ್ರತ್ ತುಫೈಲ್ ಬಿನ್ ಸಾದ್(ರ), 23. ಹಝ್ರತ್ ಸಹ್ಲ್ ಬಿನ್ ಅಮೀರ್(ರ), 24. ಹಝ್ರತ್ ಅಬ್ದುಲ್ಲಾ ಬಿನ್ ಖೈಸ್(ರ), 25. ಹಝ್ರತ್ ನಾಫಿ ಬಿನ್ ಬುದ್ಯೆಲ್ ಬಿನ್ ವಾರ್ಕಾ(ರ), 26. ಹಝ್ರತ್ ಝುಹಕ್ ಬಿನ್ ಅಬ್ದಿ ಅಮ್ರೋ(ರ). ಅವರು ಹಝ್ರತ್ ಖುತ್ಬಾ(ರ) ಅವರ ಸಹೋದರ ಆಗಿದ್ದರು. 27. ಹಝ್ರತ್ ಉಮೈರ್ ಬಿನ್ ಮಬಾದ್(ರ) ಅಲ್ಲಾಮಾ ಇಬ್ನೆ ಇಸ್‌ಹಾಕ್‌ರವರು ಅವರ ಹೆಸರು ಅಮ್ರೋ ಎಂದು ಹೇಳಿದ್ದಾರೆ, 28. ಹಝ್ರತ್ ಖಾಲಿದ್ ಬಿನ್ ಕಅಬ್(ರ), 29. ಹಝ್ರತ್ ಸುಹೇಲ್ ಬಿನ್ ಆಮಿರ್(ರ). (ಸಬ್ಲುಲ್ ಹುದಾ ವರ್‌ರಶ್ಶಾದ್, ಸಂಪುಟ–6, ಪುಟಗಳು 61–63, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್, ಅಸದುಲ್‌ಗ್ಹಾಬಾ, ಸಂಘುಟ–4, ಪುಟ–182, ದಾರುಲ್ ಕುತುಬ್ ಇಲ್‌ಮಿಯಾ)

ಆದಾಗ್ಯೂ, ಕೊಲ್ಲಲ್ಪಡದೆ ರಕ್ಷಿಸಲ್ಪಟ್ಟ ಸಹಾಬರ ಬಗ್ಗೆ ಹೀಗೆ ಬರೆಯಲಾಗಿದೆ: ಈ ಸರಿಯಾದಲ್ಲಿ ಭಾಗವಹಿಸಿದ ಇಬ್ಬರು ಸಹಾಬ(ರ)ರ ಹೆಸರುಗಳು ಹೀಗಿವೆ. ಹಝ್ರತ್ ಅಮರ್ ಬಿನ್ ಉಮಯ್ಯ ಝುಮ್‌ರಿ(ರ) ಮತ್ತು ಹಝ್ರತ್ ಮುಂಝಿರ್ ಬಿನ್ ಮುಹಮ್ಮದ್(ರ). ಕೆಲವು ಜೀವನಚರಿತ್ರೆಕಾರರ ಪ್ರಕಾರ, ಮುಂಝಿರ್ ಬದಲಿಗೆ ಹಾರಿಸ್ ಬಿನ್ ಸಿಮ್ಮಾ ಎಂದು ಬರೆಯಲಾಗಿದೆ. ಆ ಸಮಯದಲ್ಲಿ ಅವರು ತಮ್ಮ ಗುಂಪಿನಿಂದ ಬೇರ್ಪಟ್ಟು ಒಂಟೆಗಳನ್ನು ಮೇಯಿಸಲು ಅಲ್ಲಿ ಇಲ್ಲಿಗೆ ಚದುರಿ ಹೋದರು. ಅವರು ದೂರದಿಂದ ತಮ್ಮ ಡೇರೆಗಳನ್ನು ನೋಡಿದರು ಮತ್ತು ಗಾಳಿಯಲ್ಲಿ ಹಾರುತ್ತಿರುವ ಪಕ್ಷಿಗಳ ಹಿಂಡು ಕಂಡಿತು. ಅವರು ಆ ಮರುಭೂಮಿಯ ಚಿಹ್ನೆಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡರು. ತಕ್ಷಣ ಅಲ್ಲಿ ಯುದ್ಧ ನಡೆದಿದೆ ಎಂದುಕೊಂಡರು. ಹಿಂತಿರುಗಿ ಬಂದಾಗ ಕ್ರೂರಿ ಅವಿಶ್ವಾಸಿಗಳ ಕ್ರೌರ್ಯದ ಕೃತ್ಯವು ಕಣ್ಣಮುಂದೆ ಇತ್ತು. ದೂರದಿಂದ ಈ ದೃಶ್ಯವನ್ನು ನೋಡಿದ ಅವರು ತಕ್ಷಣ ತಮ್ಮ ತಮ್ಮೊಳಗೆ ಸಮಾಲೋಚಿಸಿದರು, ಈಗ ನಾವು ಏನು ಮಾಡಬೇಕು? ಅವರಲ್ಲಿ ಒಬ್ಬರು ನಾವು ತಕ್ಷಣ ಇಲ್ಲಿಂದ ಓಡಿಹೋಗಿ ಮದೀನಾ ತಲುಪಿದ ಮೇಲೆ ಹಝ್ರತ್ ಪೈಗಂಬರ್(ಸ) ಅವರಿಗೆ ವರದಿ ಮಾಡಬೇಕು ಎಂದು ಹೇಳಿದರು, ಆದರೆ ಇನ್ನೊಬ್ಬರು ಈ ಅಭಿಪ್ರಾಯವನ್ನು ಒಪ್ಪಲಿಲ್ಲ. ಅವರು ಹೇಳಿದರು ನಾನು ನಮ್ಮ ಅಮೀರ್ ಮುಂಝಿರ್ ಬಿನ್ ಅಮ್ರ್(ರ) ಹುತಾತ್ಮರಾದ ಸ್ಥಳದಿಂದ ಓಡಿಹೋಗುವುದಿಲ್ಲ ಎಂದು ಹೇಳಿದರು. ಹೀಗೆ ಅವರು ಮುಂದೆ ಸಾಗಿ ಯುದ್ಧವಾಡುತ್ತ ಶಹೀದ್ ಆದರು. (ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ–519) (ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ–6, ಪುಟ–499, ದಾರುಸ್ಸಲಾಮ್ ಸಂಶೋಧನಾ ಕೇಂದ್ರ)

ಹಝ್ರತ್ ಅಮ್ರೋ ಬಿನ್ ಉಮಯ್ಯ ಝುಮ್ರಿ(ರ) ಅವರನ್ನು ಹೊರತುಪಡಿಸಿ, ತನ್ನ ಪಾದಗಳಿಂದ ಕುಂಟಾನಾಗಿದ್ದ ಇನ್ನೊಬ್ಬ ವ್ಯಕ್ತಿಯೂ ಬದುಕುಳಿದರು. ಆ ಸಹಬಿಯ ಹೆಸರು ಕಅಬ್ ಬಿನ್ ಝೈದ್(ರ) ಆಗಿತ್ತು. ಕೆಲವು ವರದಿಗಳ ಪ್ರಕಾರ, ಅವಿಶ್ವಾಸಿಗಳು ಅವರ ಮೇಲೆ ದಾಳಿ ಮಾಡಿದರು. ಅವರು ಹಝ್ರತ್ ಹರಾಮ್ ಬಿನ್ ಮಿಲ್ಹಾನ್(ರ) ಅವರೊಂದಿಗೆ ಇದ್ದರು, ಅವರು ಗಂಭೀರವಾಗಿ ಗಾಯಗೊಂಡರು, ಮತ್ತು ಅವಿಶ್ವಾಸಿಗಳು ಅವರನ್ನು ಮೃತ ಎಂದು ತ್ಯಜಿಸಿದರು, ಆದರೆ ಅವರು ಗಂಭೀರವಾಗಿ ಗಾಯಗೊಂಡರೂ ಜೀವಂತವಾಗಿದ್ದರು. ಅವರನ್ನು ಹುತಾತ್ಮರ ಮೃತ ದೇಹಗಳಿಂದ ಎತ್ತಲಾಯಿತು. ತದನಂತರ ಅವರು ಜೀವಂತವಾಗಿದ್ದರು. ಅಂತಿಮವಾಗಿ, ಅವರು ಖಂದಕ ಯುದ್ಧದಲ್ಲಿ ಶಹೀದ್ ಆದರು.
(ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ–6, ಪುಟ–499, ದಾರುಸ್ಸಲಾಮ್ ಸಂಶೋಧನಾ ಕೇಂದ್ರ)

ಹಝ್ರತ್ ಅಮ್ರ್ ಬಿನ್ ಉಮಯ್ಯ(ರ)ರ ಬಂಧನದ ಬಗ್ಗೆ ಹೀಗೆ ಬರೆಯಲಾಗಿದೆ:

ಹಝ್ರತ್ ಅಮ್ರೋ ಬಿನ್ ಉಮಯ್ಯ(ರ) ಅವರನ್ನು ಬಂಧಿಸಲಾಯಿತು ಮತ್ತು ವಿರೋಧಿಗಳು ಕೇಳಿದಾಗ, ಹಝ್ರತ್ ಅಮ್ರೋ(ರ) ಹೇಳಿದರು: ನಾನು ಬನೂ ಮುಝರ್ ಗೋತ್ರಕ್ಕೆ ಸೇರಿವನಾಗಿದ್ದೇನೆ. ಇದರ ಮೇಲೆ ಆಮಿರ್ ಬಿನ್ ತುಫೈಲ್ ಅಮ್ರ್ ನನ್ನು ಹಿಡಿದು ಅವರ ಹಣೆಯ ಕೂದಲನ್ನು ಕತ್ತರಿಸಿದನು. ನಂತರ ಅವನು ತನ್ನ ತಾಯಿಯ ಪರವಾಗಿ ಒಬ್ಬ ಗುಲಾಮನನ್ನು ವಿಮೋಚಿಸುವುದಾಗಿ ಹರಕೆ ಮಾಡಿದ ಕಾರಣದಿಂದ ಮತ್ತು ಅವನು ಹಝ್ರತ್ ಅಮರ್(ರ)ರವರ ಗೋತ್ರವಾದ ಮುಝರ್‌ನೊಂದಿಗೆ ಸಂಬಂಧವನ್ನು ಹೊಂದಿದ ಕಾರಣದಿಂದ ಅರಬ್ ಆಚಾರ ಪ್ರಕಾರ ಹಝ್ರತ್ ಅಮರ್(ರ)ರವರ ಹಣೆಯ ಮೇಲಿನ ಭಾಗದ ಕೆಲವು ಕೂದಲುಗಳನ್ನು ಕತ್ತರಿಸಿದ ನಂತರ ಅವರನ್ನು ವಿಮೋಚಿಸಿದನು. ಅಲ್ಲಿಂದ ಹೊರಟ ಹಝ್ರತ್ ಅಮರ್(ರ) ಒಂದು ಸ್ಥಳದಲ್ಲಿ ಬನೂ ಆಮಿರ್ ಅಥವಾ ಬನೂ ಸುಲೈಮ್ ಗೋತ್ರದ ಇಬ್ಬರನ್ನು ವಧಿಸಿದರು. ಆದರೆ ಆ ಎರಡು ಗೋತ್ರಗಳೊಂದಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಶಾಂತಿಯ ಒಪ್ಪಂದ ಮಾಡಿದ್ದರು. ಆದರೆ ಅದು ಹಝ್ರತ್ ಅಮರ್(ರ)ರಿಗೆ ತಿಳಿದಿರಲಿಲ್ಲ ಆದುದರಿಂದ ಅವರ ಪರಿಹಾರ ಧನ ನೀಡಲಾಯಿತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮತ್ತು ಸಹಾಬರಿಗೆ ರಜೀಅ್ ಘಟನೆ ಮತ್ತು ಬಿಅ್ರ್ ಮಊನ ಘಟನೆ ಬಗ್ಗೆ ಸಮಾಚಾರಗಳು ಅಂದಾಜು ಒಂದೇ ಸಮಯದಲ್ಲಿ ಲಭಿಸಿತು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ ರಿಗೆ ತೀವ್ರ ದುಃಖವಾಯಿತು. ಅದಕ್ಕಿಂತ ಮೊದಲು ಮತ್ತು ಅನಂತರ ಅಂತಹ ದುಃಖ ಅವರು ಅನುಭವಿಸಲಿಲ್ಲ. ಅಂದಾಜು 80 ಸಹಾಬರು ಈ ರೀತಿ ವಂಚಿಸಲ್ಪಟ್ಟು ಅಚಾನಕವಾಗಿ ಕೊಲ್ಲಲ್ಪಟ್ಟರು. ಅವರಲ್ಲಿ ಬಹುತೇಕ ಮಂದಿ ಪವಿತ್ರ ಖುರ್‌ಆನ್ ಬಾಯಿಪಾಠ ಮಾಡಿದ ಹಾಫಿಝ್‌ಗಳಾಗಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಆ ಸಮಾಚಾರ ತನ್ನ ಎಂಬತ್ತು ಪುತ್ರರ ಮೃತ್ಯುವಿಗೆ ಸಮಾನವಾದ ಸಮಾಚಾರ ವಾಗಿತ್ತು. ಆದರೆ ಎಲ್ಲ ಸಂದರ್ಭಗಳಲ್ಲೂ ಸಹನೆದೋರಬೇಕೆಂಬ ಉಪದೇಶವನ್ನು ಇಸ್ಲಾಮ್ ನೀಡುತ್ತಿದೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಸಮಾಚಾರವನ್ನು ಆಲಿಸಿ ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್ ಎಂದು ಹೇಳುತ್ತಾ ಹೀಗೆ ಹೇಳಿದರು: ಹೀಗೆ ಸಂಭವಿಸಿದುದು ಅಬೂ ಬರಾಅ್‌ನ ಕಾರಣದಿಂದಾಗಿದೆ. ನಾನು ಅವರನ್ನು ಕಳುಹಿಸಲು ಇಷ್ಟಪಟ್ಟಿರಲಿಲ್ಲ. ಅನಂತರ ಮೌನವನ್ನು ಅವಲಂಬಿಸಿದರು.

ಅಬು ಬಾರಾಗೆ ತನ್ನ ಸೋದರಳಿಯ ಅಮೀರ್ ಬಿನ್ ತುಫೈಲ್ ತನ್ನ ರಕ್ಷಣೆ ಮತ್ತು ಭದ್ರತೆಯನ್ನು ಮುರಿದಿದ್ದಾನೆಂದು ತಿಳಿದಾಗ ಅವನಿಗೆ ಬಹಳ ದುಃಖವಾಯಿತು ಮತ್ತು ಹಝ್ರತ್ ಪೈಗಂಬರ್(ಸ) ಅವರ ಸಹಾಬರಿಗೆ ಆತನ ಕಾರಣದಿಂದ ಸಂಭವಿಸಿದ ಘಟನೆಯಿಂದ ಅವನಿಗೆ ಬಹಳ ದುಃಖವಾಯಿತು. ಆದ್ದರಿಂದ ಅಬು ಬಾರಾನ ಒಉತ್ರ ರಬಿಯಾ ತನ್ನ ಸೋದರಸಂಬಂಧಿ ಆಮಿರ್ ಬಿನ್ ತುಫೈಲ್‌ರ ಮೇಲೆ ದಾಳಿ ಮಾಡಿದನು. ರಾಬಿಯಾ ಆಮಿರ್‌ನನ್ನು ಈಟಿಯಿಂದ ಆತನ ತೊಡೆಗೆ ಹೊಡೆದನು ಇದರಿಂದಾಗಿ ಆತನು ಕುದುರೆಯ ಮೇಲಿನಿಂದ ಬಿದ್ದನು. ಮತ್ತು ನಾನು ಸತ್ತರೆ, ನನ್ನ ರಕ್ತದ ಹೊಣೆ ಅಬು ಬಾರಾನ ಮೇಲೆ ಇರುತ್ತದೆ ಮತ್ತು ನಾನು ಬದುಕಿದ್ದರೆ ನನ್ನ ವ್ಯವಹಾರವನ್ನು ನಾನು ನೋಡಿಕೊಳ್ಳುತ್ತೇನೆ ಎಂದು ಕೂಗಿ ಉಚ್ಚಸ್ವರದಲ್ಲಿ ಹೇಳಿದನು, ಆದರೆ ಅಮ್ರ್ ಬಿನ್ ತುಫೈಲ್ ಈ ದಾಳಿಯ ನಂತರ ಬದುಕುಳಿದನು. ಆತನಿಗೆ ಹಝ್ರತ್ ಪೈಗಂಬರ್(ಸ)ರ ಶಾಪವು ತಗುಲಿತು ಮತ್ತು ಅವನು ಪ್ಲೇಗ್ ಕಾಯಿಲೆಗೆ ತುತ್ತಾಗಿ ಆತನು ಅವಿಶ್ವಾಸಿಯಾಗಿಯೇ ಮರಣ ಹೊಂದಿದನು.

(ಸೀರತ್ ಅಲ್–ಹಲ್ಬಿಯಾಹ್, ಸಂಪುಟ–3, ಪುಟಗಳು 242–243, ದಾರುಲ್ ಕುತುಬ್ ಇಲ್‌ಮಿಯಾ, ಬೈರುತ್) (ದಾಯೆರಾ ಮುಆರಿಫ್, ಸೀರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ, ಸಂಪುಟ–7, ಪುಟ–164, ಬಿಜ್ಮ್ ಇಕ್ಬಾಲ್, ಲಾಹೋರ್) (ಅಲ್–ತಫ್ಸೀರ್ ಅಲ್–ಕಬೀರ್ ಲಿಇಮಾಮ್ ರಾಜಿ, ಸಂಪುಟ–9, ಭಾಗ–18, ಪುಟ–12, ದಾರುಲ್ ಕುತುಬ್ ಇಲ್‌ಮಿಯಾ 2004)

ಆದಾಗ್ಯೂ, ಅಬು ಬರಾ ಕೂಡ ಅದರಲ್ಲಿ ಭಾಗವಹಿಸಿದ್ದನು. ಆರಂಭದಲ್ಲಿ ಅವನು ಸ್ವತಃ ಬಂದು ಆ ಜನರನ್ನು ತಡೆಯಬೇಕಿತ್ತು. ಅಬು ಬರಾ' ಎಂದರೆ ಆಮಿರ್ ಬಿನ್ ಮಾಲಿಕ್‌ನ ಬಗ್ಗೆ ಎರಡು ರೀತಿಯ ಮಾತುಗಳಿವೆ. ಕೆಲವು ವಿದ್ವಾಂಸರು ಅವನನ್ನು ಸಹಚರರಲ್ಲಿ ಪರಿಗಣಿಸಿದ್ದಾರೆ, ಅಬು ಬರಾ ಅಮೀರ್ ಬಿನ್ ಮಾಲಿಕ್ ಅವರು ಬನೂ ಬಕರ್ ಮತ್ತು ಬನೂ ಜಾಫರ್ ಗೋತ್ರದ ಇಪ್ಪತ್ತೈದು ಜನರೊಂದಿಗೆ ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದಾಗ ಹಝ್ರತ್ ಪೈಗಂಬರ್(ಸ)ರು ಆಮಿರ್ ಬಿನ್ ಮಾಲಿಕ್ ಹಾಗೂ ಝುಹ್ಹಾಕ್ ಬಿನ್ ಸುಫ್ಯಾನ್ ಕಿಲಾಬಿ ಅವರನ್ನು ಬನೂನಕರ್ ಮತ್ತು ಬನೂಜಾಫರ್ ಗೋತ್ರಗಳ ಮೇಲೆ ಅಧಿಕಾರಿಯನ್ನಾಗಿ ನೇಮಿಸಿದರು. ಈ ವರದಿಯು ಅವನು ನಂತರ ಮುಸಲ್ಮಾನನಾದನೆಂದು ಸೂಚಿಸುತ್ತದೆ, ಆದರೆ ಇನ್ನೊಂದು ದೃಷ್ಟಿಕೋನದ ಪ್ರಕಾರ ಅಬು ಬರಾ

ಮುಸ್ಲಿಮನಾಗಲಿಲ್ಲ. ಆದಾಗ್ಯೂ, ಅವು ಎರಡೂ ವಿಧಗಳಾಗಿವೆ. (ಅಲ್-ಅಸಾಬಾ ಫಿ ತಮೀಜ್ ಅಲ್-ಸಹಾಬಾ, ಸಂಪುಟ-3, ಪುಟಗಳು 485-486, ದಾರುಲ್ ಕುತುಬ್ ಇಲ್‌ಮಿಯಾ, ಬೈರುತ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಈ ಬಗ್ಗೆ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಹಾಗೂ ಅವರ ಸಹಾಬರಿಗೆ ರಜೀ ಘಟನೆ ಹಾಗೂ ಬಿಅ್‌ರೆ ಮಊನಾದ ಘಟನೆಯ ಬಗ್ಗೆ ಒಂದೇ ಸಮಯದಲ್ಲಿ ಮಾಹಿತಿ ಲಭಿಸಿತು. ಮತ್ತು ಅವರು(ಸ) ತೀವ್ರ ಆಘಾತಕ್ಕೊಳಗಾದರು. ಅಂತಹ ಆಘಾತವು ಅವರಿಗೆ ಹಿಂದೆಂದೂ ಸಂಭವಿಸಲಿಲ್ಲ ಮತ್ತು ನಂತರ ಸಂಭವಿಸಿಲ್ಲ ಎಂದು ವರದಿಗಳಲ್ಲಿ ಹೇಳಲಾಗಿದೆ. ವಾಸ್ತವವಾಗಿ, ಸುಮಾರು ಎಂಬತ್ತು ಸಹಾಬೀಯರು ವಂಚನೆಯಿಂದ ಈ ರೀತಿ ಹಠಾತ್ತನೆ ಕೊಲ್ಲಲ್ಪಟ್ಟಿರುವುದು ಅದೂ ಪವಿತ್ರ ಖುರ್‌ಆನ್‌ನ ಖಾರಿಗಳಾಗಿದ್ದರು ಮತ್ತು ಬಡ ಮತ್ತು ನಿಸ್ವಾರ್ಥ ವರ್ಗಕ್ಕೆ ಸೇರಿದವರು. ಅರಬ್ಬರ ಅನಾಗರಿಕ ಪದ್ಧತಿಗಳು ಮತ್ತು ಸಂಪ್ರದಾಯಗಳನ್ನು ಪರಿಗಣಿಸಿದರೆ ಅದು ಅಸಾಮಾನ್ಯ ಘಟನೆಯಾಗಿರಲಿಲ್ಲ, ಮತ್ತು ಹಝ್ರತ್ ಪೈಗಂಬರ್(ಸ) ಅವರಿಗೆ, ಈ ಸುದ್ದಿಯು ತಮ್ಮ ಸತ ಎಂಬತ್ತು ಪುತ್ರರ ಸಾವಿನ ಸುದ್ದಿಯಂತಿತ್ತು, ಮತ್ತು ಅದಕ್ಕಿಂತ ಹೆಚ್ಚಾಗಿತ್ತು, ಏಕೆಂದರೆ ಆಧ್ಯಾತ್ಮಿಕ ವ್ಯಕ್ತಿಗೆ ಆಧ್ಯಾತ್ಮಿಕ ಸಂಬಂಧವು ನಿಸ್ಸಂದೇಹವಾಗಿಯು ಲೌಕಿಕ ವ್ಯಕ್ತಿಗೆ ಲೌಕಿಕ ಸಂಬಂಧವು ಪ್ರಿಯವಾಗಿರುವುದಕ್ಕಿಂತ ಹೆಚ್ಚು ಪ್ರಿಯವಾಗಿತ್ತು. ಆದ್ದರಿಂದ ಹಝ್ರತ್ ಪೈಗಂಬರ್(ಸ) ಅವರಿಗೆ ಈ ಘಟನೆಗಳಿಂದ ತೀವ್ರವಾಗಿ ಆಘಾತಕ್ಕೊಳಗಾದರು, ಆದರೆ ಇಸ್ಲಾಂನಲ್ಲಿ ಯಾವುದೇ ಸಂದರ್ಭದಲ್ಲಿಯು ತಾಳ್ಮೆ ವಹಿಸಬೇಕು ಎಂದು ಬೋಧಿಸಲಾಗಿದೆ. ಹಝ್ರತ್ ಪೈಗಂಬರ್(ಸ) ಈ ಸುದ್ದಿಯನ್ನು ಕೇಳಿದ ತಕ್ಷಣ **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಎಂದು ಪಠಿಸಿ ಹೀಗೆ ಹೇಳಿ ಮೌನವಹಿಸಿದರು: ಹೀಗೆ ಸಂಭವಿಸಿದುದು ಅಬೂ ಬರಾಅ್‌ನ ಕಾರಣದಿಂದಾಗಿದೆ. ನಾನು ಅವರನ್ನು ಕಳುಹಿಸಲು ಇಷ್ಟಪಟ್ಟಿರಲಿಲ್ಲ. ನಜದ್ ಜನರಿಂದ ನನಗೆ ಭಯವಿತ್ತು."

ಬಿಅ್‌ರ್ ಮಊನಾ ಮತ್ತು ರೆಜೀಯ ಘಟನೆಗಳು ಅರಬ್ ಗೋತ್ರದ ಜನಾಂಗದವರ ಹೃದಯದಲ್ಲಿ ಇಸ್ಲಾಂ ಧರ್ಮ ಮತ್ತು ಇಸ್ಲಾಂ ಧರ್ಮದ ಅನುಯಾಯಿಗಳ ಬಗ್ಗೆ ತೀವ್ರ ದ್ವೇಷ ಮತ್ತು ಅಸೂಯೆಯನ್ನು ತೋರಿಸುತ್ತವೆ. ಈ ಜನರು ಸಹ ಇಸ್ಲಾಂ ಧರ್ಮದ ವಿರುದ್ಧ ಅತ್ಯಂತ ಅವಮಾನಕರ ಸುಳ್ಳು, ಮೋಸ ಮತ್ತು ವಂಚನೆಯಿಂದ ದೂರವಿರಲಿಲ್ಲ, ಮತ್ತು ಮುಸ್ಲಿಮರು, ಅವರ ಮಹಾನ್ ಬುದ್ಧಿವಂತಿಕೆ ಮತ್ತು ಎಚ್ಚರಿಕೆಯ ಮನಸ್ಸಿನ ಹೊರತಾಗಿಯೂ, ಕೆಲವೊಮ್ಮೆ ಅವರ ಸತ್ಯವಿಶ್ವಾಸದ ಉತ್ತಮ ನಂಬಿಕೆಯಿಂದ ಅವರಿಗೆ ಬಲಿಯಾಗುತ್ತಿದ್ದರು. ಪವಿತ್ರ ಖುರ್‌ಆನ್‌ನ ಹಿಫ್ಝಾರ್, ನಮಾಝ್ ನಿರ್ವಹಿಸುವವರು, ತಹಜ್ಜುದ್ ನಮಾಝ್ ನಿರ್ವಹಿಸುವವರು, ಮಸೀದಿಯ ಒಂದು ಮೂಲೆಯಲ್ಲಿ ಕುಳಿತು ಅಲ್ಲಾಹನ ನಾಮಸ್ಮರಣೆ ಮಾಡುವವರು, ಮತ್ತು ನಂತರ ಬಡವರು, ನಿರ್ಗತಿಕರು ಮತ್ತು ಹಸಿವಿನಿಂದ ಬಳಲಲ್ಪಟ್ಟವರು ಇಂತಹ ಜನರನ್ನು ಈ ಹಿಂಸಾಕೋರರು ಧರ್ಮವನ್ನು ಕಲಿಯುವ ನೆಲದಲ್ಲಿ ತಮ್ಮ ಬಳಿಗೆ ಆಹ್ವಾನಿಸಿದ ನಂತರ ಅವರು ಅತಿಥಿಗಳಾಗಿದ್ದಾಗ, ಅವರನ್ನು ಬರ್ಬರವಾಗಿ ಕೊಲ್ಲಲಾಯಿತು.

ಹಝ್ರತ್ ಪೈಗಂಬರ್(ಸ) ಅವರಿಗೆ ಈ ಘಟನೆಗಳಿಂದ ಎಷ್ಟು ದುಃಖ ಅನುಭವಿಸಿದ್ದರು ಅದು ಕಡಿಮೆಯಾಗಿತ್ತು ಆದರೆ ಆ ಸಮಯದಲ್ಲಿ ಅವರು ರಾಜಿ ಮತ್ತು ಬಿಅ್‌ರೆ ಮಊನಾದ ರಕ್ತಸಿಕ್ತ ಕೊಲೆಗಾರರ ವಿರುದ್ಧ ಯಾವುದೇ ಯುದ್ಧ ಕ್ರಮವನ್ನು ತೆಗೆದುಕೊಳ್ಳಲಿಲ್ಲ.
(ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ), ಎಂ.ಎ, ಪುಟ 520-521)

ರಜೀ ಘಟನೆ ಮತ್ತು ಬಿಅ್‌ರೆ ಮಉನಾ ಘಟನೆಯ ನಂತರ, ಹಝ್ರತ್ ಪೈಗಂಬರ್(ಸ) ಒಂದು ತಿಂಗಳ ಕಾಲ ನಮಾಝಿನಲ್ಲಿ ಖುನೂತ್ ಮಾಡುತ್ತಿದ್ದರು. ಒಂದು ವರದಿಯ ಪ್ರಕಾರ, ಹಝ್ರತ್ ಪೈಗಂಬರ್(ಸ) ರಜೀ ಘಟನೆ ಮತ್ತು ಬಿಅ್‌ರೆ ಮಉನಾ ದುರಂತದ ದುರಂತ ಸುದ್ದಿಯನ್ನು ಅದೇ ರಾತ್ರಿ ಸ್ವೀಕರಿಸಿದರು. ಈ ಎರಡು ಘಟನೆಗಳಲ್ಲಿ, ಸಹಾಬೀಯರು ವಂಚನೆ ಮತ್ತು ವಿಶ್ವಾಸಘಾತುಕತನದಿಂದ ಕೊಲ್ಲಲ್ಪಟ್ಟರು. ರಜೀಯಲ್ಲಿ ಕೇವಲ ಹತ್ತು ಸಹಾಬಾಗಳಿದ್ದರೆ, ಸರಿಯಾ ಬಿಅ್‌ರೆ ಮಊನಾದಲ್ಲಿ ಎಪ್ಪತ್ತು ಸಹಾಬಾಗಳಿದ್ದರು ಅದರಲ್ಲಿ ಇಬ್ಬರು ಮಾತ್ರ ಜೀವಂತವಾಗಿದ್ದರು. ಆದ್ದರಿಂದ, ಹಝ್ರತ್ ಪೈಗಂಬರ್(ಸ) ಅವರು ಬಿಅ್‌ರೆ ಮಊನಾದ ಘಟನೆಯಿಂದ ತುಂಬಾ ದುಃಖಿತರಾಗಿದ್ದರು ಮತ್ತು ಬೇಸರಗೊಂಡಿದ್ದರು ಎಂದು ಹಝ್ರತ್ ಅನಸ್(ರ) ಅವರ ಈ ವರದಿಯಿಂದ ಊಹಿಸಬಹುದು. ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಅವರು ಬಿಅ್‌ರೆ ಮಊನಾದ ಶಹೀದರ ಬಗ್ಗೆ ಚಿಂತಿಸಿದಷ್ಟು ಚಿಂತೆ ನಾನು ಎಂದಿಗೂ ನೋಡಲಿಲ್ಲ. (ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ-6, ಪುಟ-506, ದಾರುಸ್ಸಲಾಮ್ ಸಂಶೋಧನಾ ಕೇಂದ್ರ)

ರಜೀಅ್ ಘಟನೆ ಮತ್ತು ಬಿಅ್‌ರ್ ಮಊನ ಘಟನೆ ಸಂಭವಿಸಿದ ನಂತರ ಒಂದು ತಿಂಗಳು ಪ್ರತಿದಿನ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸುಬ್‌ಹ್ ನಮಾಝ್‌ನಲ್ಲಿ ಅತ್ಯಂತ ದುಃಖದಿಂದ ರಅ್‌ಲ್, ಝುಕ್‌ವಾನ್, ಅಸಿಯ್ಯಾ ಮತ್ತು ಬನೂ ಲಹ್‌ಯಾನ್ ಗೋತ್ರಗಳ ಮೇಲೆ ಲಾನತ್ ಹಾಕಿದರು (ಶಪಿಸಿದರು). (ಅಸದುಲ್‌ಗಾ.ಬ, ಸಂಪುಟ-3, ಪುಟ-108, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಅನಸ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ ಹಝ್ರತ್ ಪೈಗಂಬರ್(ಸ)ರು ರಿಅ್‌ಲ್ ಮತ್ತು ಝುಕ್ವಾನ್ ಗೋತ್ರಗಳನ್ನು ಒಂದು ತಿಂಗಳ ಕಾಲ ಶಪಿಸಿದರು. (ಸಹೀಹ್ ಅಲ್-ಬುಖಾರಿ, ಕಿತಾಬ್ ಅಲ್-ವಿತ್ರ್, ಅಧ್ಯಾಯ ಅಲ್-ಖುನೂತ್, ಹದೀಸ್-1003)

ಸಹೀಹ್ ಮುಸ್ಲಿಂನಲ್ಲಿ ಪ್ರಾರ್ಥನೆಯ ಪದಗಳನ್ನು ಈ ಕೆಳಗಿನಂತೆ ಉಲ್ಲೇಖಿಸಲಾಗಿದೆ: ಓ ನನ್ನ ಪ್ರಭೂ! ರಅ್‌ಲ್, ಝುಕ್‌ವಾನ್ ಮತ್ತು ಉಸೈಯಾ ಗೋತ್ರಗಳನ್ನು ಶಪಿಸು ಏಕೆಂದರೆ ಅವರು ಅಲ್ಲಾಹ್ ಹಾಗೂ ಅವನ ಪ್ರವಾದಿ(ಸ)ರಿಗೆ ಅವಿಧೇಯರಾದರು. ಗ಼ಿಫಾರ್ ಗೋತ್ರವನ್ನು ಸರ್ವಶಕ್ತನಾದ ಅಲ್ಲಾಹನು ಕ್ಷಮಿಸಲಿ ಮತ್ತು ಅಸ್ಲಮ್ ಗೋತ್ರವನ್ನು ಅಲ್ಲಾಹನು ಸಂರಕ್ಷಿಸಲಿ. (ಸಹೀಹ್ ಮುಸ್ಲಿಂ ಕಿತಾಬ್ ಅಲ್-ಮಸಾಜಿದ್ ವಮವಾಝಿಸ್ಸಲಾ.... ಹದೀಸ್-1557)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ರಜೀ ಮತ್ತು ಬಿಅ್‌ರೆ ಮಊನಾದ ದುರಂತದ ಸುದ್ದಿಗಳನ್ನು ಹಝ್ರತ್ ಪೈಗಂಬರ್(ಸ) ಅವರಿಗೆ ತಿಳಿದ ಬಗ್ಗೆ ಉಲ್ಲೇಖಿಸುತ್ತಾ ಅವರು ಹೇಳುತ್ತಾರೆ:

"ರಜೀಅ್ ಘಟನೆ ಮತ್ತು ಬಿಅ್‌ರ್ ಮಊನ ಘಟನೆ ಸಂಭವಿಸಿದ ನಂತರ ಒಂದು ತಿಂಗಳು ಪ್ರತಿದಿನ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸುಬ್‌ಹ್ ನಮಾಝ್‌ನಲ್ಲಿ ಅತ್ಯಂತ ದುಃಖದಿಂದ ರಅ್‌ಲ್, ಝುಕ್‌ವಾನ್, ಅಸಿಯ್ಯಾ ಮತ್ತು ಬನೂ ಲಹ್‌ಯಾನ್ ಗೋತ್ರಗಳ ಹೆಸರು ಹೇಳುತ್ತಾ ಅಲ್ಲಾಹನ ಸನ್ನಿಧಿಯಲ್ಲಿ ಹೀಗೆ ಪ್ರಾರ್ಥಿಸುತ್ತಿದ್ದರು: ಹೇ ನಮ್ಮ ಪ್ರಭೂ, ನಮ್ಮ ಸ್ಥಿತಿಯ ಬಗ್ಗೆ ಕರುಣೆದೋರು. ಇಸ್ಲಾಮಿನ ಶತ್ರುಗಳನ್ನು ತಡೆಗಟ್ಟು ಅವರು ನಿನ್ನ ಧರ್ಮವನ್ನು ನಾಶಮಾಡಲು ನಿಷ್ಕರುಣೆಯಿಂದ ಮತ್ತು ಕಠಿಣ ಹೃದಯಿಗಳಾಗಿ ನಿರಪರಾಧಿ ಮುಸ್ಲಿಮರ ರಕ್ತಪಾತ ಮಾಡುತ್ತಿದ್ದಾರೆ." (ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂಎ(ರ), ಪುಟ-521)

ಇದು ಸರಿಯಾ ಸರಿಯಾ ಬಿಅ್‌ರೆ ಮಊನಾದ ಘಟನೆಯಾಗಿದೆ.

ನಾನು ಯಾವಾಗಲೂ ನಿಮ್ಮೊಂದಿಗೆ ಹೇಳುತ್ತಿರುವ ಹಾಗೆ ಫೆಲೆಸ್ತೀನಿನ ದೌರ್ಜನ್ಯ ಪೀಡಿತರಾದ ಜನರಿಗೋಸ್ಕರ ಪ್ರಾರ್ಥಿಸುವುದನ್ನು ಮುಂದುವರಿಸಿರಿ. ಅಲ್ಲಾಹನು ದೌರ್ಜನ್ಯಗಾರರನ್ನು ಹಿಡಿಗೂಡುವ ವ್ಯವಸ್ಥೆ ಬೇಗನೆ ಮಾಡುವವನಾಗಲಿ. ಆ ಸಹಾಬರನ್ನು ಹತ್ಯೆ ಮಾಡಿದ ಹಾಗೆ ನಿಷ್ಕಳಂಕರಾದ ಜನರನ್ನು ಕೊಲ್ಲಲಾಗುತ್ತಿದೆ. ಪೆಲೆಸ್ತೀನಿನ ಜನರನ್ನು ವಂಚನೆಯಿಂದ ಒಂದು ಸ್ಥಳಕ್ಕೆ ಕಳುಹಿಸಲಾಗುತ್ತಿದೆ. ಕೆಲವು ಸಾರಿ ಇನ್ನೊಂದು ಸ್ಥಳಕ್ಕೆ ಕಳುಹಿಸಲಾಗುತ್ತಿದೆ. ಅನಂತರ ಅವರ ಮೇಲೆ ಬಾಂಬ್ ದಾಳಿ ನಡೆಸಲಾಗುತ್ತಿದೆ. ಸರ್ವಶಕ್ತನಾದ ಅಲ್ಲಾಹನು ದಯೆದೋರುವವನಾಗಲಿ.

ಲೋಕದ ಸ್ಥಿತಿಯ ಸುಧಾರಣೆ ಬಗ್ಗೆ ಸಹ ಪ್ರಾರ್ಥಿಸಿರಿ. ಲೋಕ ಬಹಳ ವೇಗವಾಗಿ ವಿನಾಶದ ಕಡೆಗೆ ಸಾಗುತ್ತಿದೆ. ಯುದ್ಧದ ಚಿಹ್ನೆಗಳು ವರ್ಧಿಸುತ್ತಾ ಇವೆ. ಅಲ್ಲಾಹನು ಅಹ್ಮದಿಯರನ್ನು ಯುದ್ಧದ ಕೆಟ್ಟ ಪರಿಣಾಮಗಳಿಂದಲೂ ಅದರ ಕೆಡುಕುಗಳಿಂದಲೂ ಸಂರಕ್ಷಿಸುವವನಾಗಲಿ.

ಪಾಕಿಸ್ಥಾನದ ಅಹ್ಮದಿಯರಿಗೋಸ್ಕರ ವಿಶಿಷ್ಟವಾಗಿ ಪ್ರಾರ್ಥಿಸಿರಿ. ಈಗ ಅವರಿಗೆ ಕಷ್ಟಗಳು ವರ್ಧಿಸುತ್ತಾ ಇವೆ. ಅಲ್ಲಾಹನು ದಯೆದೋರಲಿ ಮತ್ತು ದೌರ್ಜನ್ಯಗಾರರಿಂದ ಅಹ್ಮದಿಯರಿಗೆ ವಿಮೋಚನೆ ನೀಡುವವನಾಗಲಿ - ಆಮೀನ್.

**(ಅಲ್‌ಫಝ್ಲ್ ಇಂಟರ್‌ನ್ಯಾಶನಲ್ ದಿನಪತ್ರಿಕೆ 28-06-2024, ಪುಟ-2 ರಿಂದ 6)**

-------------*****-------------

ಪ್ರಮುಖ ಸೂಚನೆ ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **ಖುತ್‌ಬ ಜುಮುಅ**ವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ

**MUSLIM TELEVISION AHMADIYYA INTERNATIONAL**
**www.mta.tv**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಪವಾಡ ರೀತಿಯಲ್ಲಿ ಅನ್ಯಭಾಷೆಯಲ್ಲಿ ದೇವವಾಣಿಯಾದರೆ ಆತಂಕವೇ ಇಲ್ಲ.

ಕೆಲವರು ಹಝ್ರತ್ ಮಸೀಹ್ ಮೌಊದ್(ಅ) ರವರ ಮೇಲಾದ ದೇವವಾಣಿಗಳನ್ನು ಮುಂದಿಟ್ಟು ಆಕ್ಷೇಪ ವ್ಯಕ್ತಪಡಿಸುತ್ತಾರೆ. ಅದಾಗ್ಯೂ ಅರಬಿ ಮತ್ತು ಉರ್ದು ಹೊರತಾಗಿ ಆದ ಅನ್ಯಭಾಷೆಯ ದೇವವಾಣಿಗಳು ಅದು ದೃಷ್ಟಾಂತ ಮತ್ತು ಪವಾಡಗಳ ನೆಲೆಯಲ್ಲಿ ಆದದ್ದಾಗಿವೆ. ಅರಬಿಯಲ್ಲಿ ದೇವವಾಣಿಯಾಗಲು ಕಾರಣ ಅರಬಿ ಇಸ್ಲಾಂ ಧರ್ಮದ ಧಾರ್ಮಿಕ ಭಾಷೆಯಾಗಿದೆ. ಅದೇ ರೀತಿ ಉರ್ದು ಮುಸ್ಲಿಮರ ದೇಶಿಯ ಭಾಷೆಯಾಗಿದೆ. ಆದುದರಿಂದ ಮಸೀಹರ(ಅ) ಮೊದಲ ಸಂಬೋಧಕರು ಉರ್ದು ಭಾಷಿಯರಾಗಿದ್ದಾರೆ. ಹಾಗೆ ನೋಡಿದರೆ ಅವರ ದೇವವಾಣಿಗಳ ಸೈದ್ಧಾಂತಿಕ ಭಾಗವೆಲ್ಲ ಅರಬಿಯಲ್ಲಿದೆ ಅಥವಾ ಉರ್ದುವಿನಲ್ಲಿ. ಇತರ ಭಾಷೆಗಳ ದೇವವಾಣಿಗಳೆಲ್ಲ ಪ್ರಚಾರದಲ್ಲಿ ತೊಡಕಾಗುವಂತಿರಲಿಲ್ಲ ಅವು ಕೇವಲ ಒಂದು ಹೆಚ್ಚಿನ ಪುಷ್ಟಿ ನೀಡಲು ದೃಷ್ಟಾಂತ ನೆಲೆಯದ್ದಾಗಿದ್ದವು.

ಕ್ರೈಸ್ತರು ಮತ್ತು ವಿಶೇಷವಾಗಿ ಮೇರಿ ಅವರು ಈ ವಚನದ ಬಗ್ಗೆ, ರಸೂಲುಲ್ಲಾಹ್(ಸ) ರವರ ಬಗ್ಗೆ ಆಕ್ಷೇಪವೆತ್ತಿದ್ದಾರೆ. ಮೇರಿ ಸಾಹಿಬರು ಪ್ರಕಾರ ಈ ವಚನದಿಂದ ತಿಳಿದುಬರುವುದೇನೆಂದರೆ ಮುಹಮ್ಮದ್ ರಸೂಲುಲ್ಲಾಹ್(ಸ) ಕೇವಲ ಅರಬಿಗಾಗಿ ಆಗಮಿಸಿದ್ದರು. ಅದರ ಜೊತೆಯಲ್ಲಿ ಹೀಗೂ ಬರೆಯುತ್ತಾರೆ. ಈ ವಚನದಿಂದ ಸಾಬೀತಾಗುವುದೇನೆಂದರೆ ಪವಿತ್ರ ಖುರ್‌ಆನ್‌ನ ಭಾಷಾಂತರ ಮಾಡುವುದು ಧರ್ಮಬದ್ಧವಾಗಿದೆ ಎಂದು. ಅವರ ಈ ಎರಡು ಮಾತುಗಳು ತದ್ವಿರುದ್ಧವಾಗಿವೆ. ನಬಿ ಕರೀಂ(ಸ) ಕೇವಲ ಅರಬಿಯರಿಗೆ ಆಗಮಿಸಿದವರಾಗಿದ್ದರೆ. ಭಾಷಾಂತರದ ಪ್ರಶ್ನೆಯೇ ಬರುತ್ತಿರಲಿಲ್ಲ. ಇತರ ದೇಶಗಳೊಡನೆ ಸಂಬಂಧವೇ ಇಲ್ಲ ಎಂದಾಗ ಭಾಷಾಂತರ ಮಾಡುವ ಅವಶ್ಯಕತೆಯೇ ಇರುತ್ತಿರಲಿಲ್ಲ. ಈ ವಚನದಿಂದ ಭಾಷಾಂತರ ಮಾಡುವುದು ಧರ್ಮಬದ್ಧ ಎಂದು ಸಾಬೀತಾದಾಗ ಅವರ ಪ್ರವಾದಿತ್ವ ಇತರ ದೇಶದವರಿಗೂ ಸಂಬಂಧಿಸಿದ್ದಾಗಿದೆ ಎಂದು ನಿಚ್ಚಳವಾಯಿತು. ವಾಸ್ತವದಲ್ಲಿ ಹೇಳಬೇಕಾದರೆ ಹಝ್ರತ್ ರಸೂಲುಲ್ಲಾಹ್(ಸ) ಕೇವಲ ಅರಬರಿಗಾಗಿ ಆಗಮಿಸಿದ್ದರು ಎಂಬ ವಿಷಯ ಈ ವಚನದ್ದಾಗಿರಲಿಲ್ಲ. ಏಕೆಂದರೆ ಪವಿತ್ರ ಖುರ್‌ಆನ್‌ನ ಇತರ ಸ್ಥಳಗಳಿಂದ ಇದು ಸ್ಪಷ್ಟವಿದೆ. ಅವರು ಸರ್ವಲೋಕಗಳಿಗಾಗಿ ಆಗಮಿಸಿದ್ದರು. ಈ ವಚನದಿಂದ ಇದು ಸಹ ತಿಳಿದುಬರುತ್ತದೆ. ಅರಬಿ ಭಾಷೆಯು "ಉಮುಲ‌ಅಲ್ ಸಿನ" ಆಗಿದೆ. ಏಕೆಂದರೆ ಅರಬಿಯಲ್ಲಿ ಆಗಮಿಸಿದ ಪ್ರವಾದಿವರ್ಯರಿಗೆಯೇ ಸರ್ವಲೋಕಗಳ ಸುಧಾರಣೆಯ ಹೊಣೆ ಹೊರಿಸಲಾಗಿದೆ. ಆದುದರಿಂದ ಅರಬಿಯಲ್ಲಿ ಅವತರಿಸಿದ ದೇವವಾಣಿಯು ಸರ್ವಲೋಕಗಳಿಗೆ ಮಾರ್ಗದರ್ಶಕವಾಗಿರುವ ಕಾರಣ ಸಾಬೀತಾಗುವುದೇನೆಂದರೆ ಅರಬಿ ಭಾಷೆಯು ಆಯಾಯ ನೆಲೆಯಲ್ಲಿ ಎಲ್ಲಾ ಭಾಷೆಗಳ ಮೂಲವಾಗಿದೆ ಮತ್ತು ಇತರ ಭಾಷೆಗಳು ಅದರ ಶಾಖೆಗಳಾಗಿವೆ.

ಈ ವಚನದಿಂದ ಆರ್ಯರ ಈ ತರ್ಕವು ರದ್ದಾಗುತ್ತದೆ. ದಿವ್ಯವಾಣಿಯು ಯಾರು ಅರಿಯದಂತಹ ಭಾಷೆಯಲ್ಲಿ ಆಗಬೇಕು. ಅದರಿಂದ ಎಲ್ಲರೂ ಸಮಾನರು ಎಂಬಂತಾಗುತ್ತದೆ. ಆದರೆ ಪವಿತ್ರ ಖುರ್‌ಆನ್ ಹೇಳುವುದು ದಿವ್ಯವಾಣಿಯು ಜನರ ಭಾಷೆಯಲ್ಲಿಯೇ ಅವತರಿಸಬೇಕು. ಅದರಿಂದ ಪ್ರವಾದಿಯರಿಗೆ ಜನರನ್ನು ಬೋಧಿಸಲು ಸುಲಭವಾಗುತ್ತದೆ. ಒಂದು ಭಾಷೆಯನ್ನು ಯಾರು ಅರಿಯದಂತಾದರೆ ಆ ದಿವ್ಯವಾಣಿಯ ಪ್ರಯೋಜನವಾದರೂ ಏನು? ಆರ್ಯರ ಈ ವಿಶ್ವಾಸ ಹೀಗೂ ತಪ್ಪೆಂದು ಹೇಳಬಹುದು. ವೇದಗಳು ಅವತರಿಸಿದಾಗ ಅದು ಋಷಿಮುನಿಗಳಿಗೆ ಅರಿಯದಂತಾದರೆ ಏನು ಪ್ರಯೋಜನವಾಯಿತು. ಅವರಿಗೆ ವೇದಗಳು ತಿಳಿಸಿಕೊಟ್ಟರೆ ಸಮಾನತೆ ಎಲ್ಲಿ ಉಳಿಯಿತು. ಒಂದು ವೇಳೆ ಆ ಸಮಾಜದ ಜನರಿಗೆ ತಿಳಿಸಿಕೊಟ್ಟರೆ, ಆ ಸಮಯಕ್ಕೆ ಜನರಲ್ಲಿ ಸಮಾನತೆ ಇತ್ತು ಎಂದು ತಿಳಿದುಕೊಳ್ಳೋಣ. ಆದರೆ ಆನಂತರ ಬಂದ ಜನರಲ್ಲಿ ಸಮಾನತೆ ಎಲ್ಲಿ ಬಂತು. ಈಗ ಪಂಡಿತರೂ ಸಹ ವೇದಗಳ ಭಾಷೆ ಅರಿಯದಂತಾಗಿದೆ. ಅಂದ ಹಾಗೆ ಈ ಕಾಲಘಟ್ಟದಲ್ಲಿ ಅವತರಿಸಿರುವ ಹಝ್ರತ್ ಮಸೀಹ್ ಮೌಊದ್(ಅ) ರವರ ಮೇಲೆ ಅರಬಿಯ ನಂತರ ಉರ್ದುವಿನಲ್ಲಿ ದಿವ್ಯವಾಣಿ ಹೇರಳವಾಗಿ ಆಗಿದೆ. ನಾನು ಭಾವಿಸುತ್ತೇನೆ. ಈ ವಚನವನ್ನು ದೃಷ್ಟಿಯಲ್ಲಿರಿಸಿಕೊಂಡು ಹೇಳಬಹುದಾಗಿದೆ. ಭಾರತದ ಮುಂದಿನ ಭಾಷೆ ಉರ್ದು ಆಗಿರಬಹುದು ಮತ್ತು ಅದರ ಮುಂದೆ ಯಾವ ಭಾಷೆಗಳು ಸಹ ನಿಲ್ಲಲಾರವು.

"ಲಿಯುಬಯ್ಯಿನ ಲಹುಮ್" ನಂತರ "ಯುಝಿಲ್ಲುಲ್ಲಾಹು" ನಲ್ಲಿ ಅಲ್ಲಾಹನು ಸಂಕೇತಿಸಿದ್ದೇನೆಂದರೆ ಒಂದು ಭಾಷೆಯನ್ನು ಅರಿಯುವ ಯಾವ ಸಾಧನೆಗಳು ಇರದಿದ್ದರೆ ಅಲ್ಲಾಹನ ಅವರಿಗೆ ದಾರಿ ತಪ್ಪಿದವರು ಎಂದು ಹೇಳುವುದಿಲ್ಲ. ಅರಿವಿಗೆ ತಂದ ನಂತರವೇ ಹೊಣೆ ಹೇರಬಹುದಾಗಿದೆ. ಆದ್ದರಿಂದಲೇ ತಬಯ್ಯನ ನಂತರವೇ ಅಲ್ಲಾಹನು ಅವರಿಗೆ ತಪ್ಪತಸ್ತರು ಎನ್ನುತ್ತಾನೆ. ಅದರಿಂದ ಸ್ಪಷ್ಟವಾಗುವುದೇನಂದರೆ ಯಾವ ಸಮುದಾಯಕ್ಕೆ ಖಚಿತವಾದ ಮಾಹಿತಿ ದೊರೆಯಂತದಾಗುತ್ತದೆ ಅವರಿಗೆ ಅವರಿಗೆ ವಿಶ್ವಾಸ ತರದಿದ್ದರೆ ಶಿಕ್ಷಿಸಲಾಗುವುದು. ಈ ಪೈಕಿ ಈ ಆರೋಪವು ದೂರಪಡಬಯಸುತ್ತೇನೆ ಅದು ಮಬಾಯಿನೇತರರು ನಮ್ಮ ಮೇಲೆ ಹೊರಿಸುತ್ತಾರೆ, ನಾವು ಎಲ್ಲಾ ವ್ಯಕ್ತಿಗಳಿಗೂ ಶಿಕ್ಷಾರ್ಹರು ಎನ್ನುತ್ತೇವೆ ಎಂದು, ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ದಾವೆಯು ಸಂದೇಶ ತಲುಪಲಿ ಅಥವಾ ತಲುಪದಿರಲಿ ಶಿಕ್ಷಾರ್ಹವಾಗಿರುತ್ತಾರೆ ಎನ್ನುವುದು ಇದು ಆರೋಪವೂ ತಪ್ಪಾಗಿದೆ. ನಾವು ಈ ವಿಶ್ವಾಸ ಹೊಂದಲು ಹೇಗೆ ಸಾಧ್ಯ, ಅದಾಗ್ಯೋ ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ವಿವರಿಸಿದೆ- ತಬಯ್ಯನ ನಂತರವೇ ಶಿಕ್ಷಿಸಲಾಗುವುದು.

**(ತಫ್ಸೀರೆ ಕಬೀರ್, ಸಂಪುಟ-3, ಪುಟ-442-444, ಮುದ್ರಣ 2010 ಖಾದಿಯಾನ್)**

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ಸಾಲಾನ ಇಜ್ತೆಮಾ 2024 ನಡೆಯುವ ದಿನಾಂಕಗಳು

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 25, 26 ಮತ್ತು 27ನೇ ಅಕ್ಟೋಬರ್ 2023 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಪೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್(ಅತಬಿಅ)ರವರ ಹೊಸ ಖುತ್‌ಬ ಜುಮುಆ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ.

**(ಸಂಪಾದಕರು)**

**ಈದ್ ಮತ್ತು ಜುಮುಅ ಒಂದೇ ದಿನ ಬಂದರೆ, ಅದರ ಬಗ್ಗೆ**

ಪ್ರವಾದಿ ಮುಹಮ್ಮದ್(ಸ)ರ ಸುನ್ನತ್ ಮತ್ತು ಖಿಲಫಾ ಎ ರಾಶಿದೀನ್ ಹಾಗೂ ಪ್ರವಾದಿ(ಸ) ಅವರ ಸಹಾಬರವರ ನಂಬಿಕೆಯು ಹೀಗಿತ್ತು ಅಂದರೆ ಅವರೆಲ್ಲರೂ ಅಂದು ಈದ್ ನಮಾಝ್ ನಿರ್ವಹಿಸಿದ ನಂತರ ಜುಮುಅದ ನಮಾಝನ್ನು ಸಮಯಕ್ಕೆ ಸರಿಯಾಗಿ ನಿರ್ವಹಿಸಿದರು.

ಹಾಗೂ ದೂರದ ಪ್ರದೇಶಗಳಿಂದ ಬರುವವರಿಗೆ ಜುಮುಅದ ನಮಾಝಿನಲ್ಲಿ ಬಿಡುವು ನೀಡಿ, ಅವರವರ ಪ್ರದೇಶದಲ್ಲೇ ಝುಹರ್ ನಮಾಝನ್ನು ನಿರ್ವಹಿಸುವಂತೆ ಸೂಚನೆ ನೀಡಿದರು.

**ಆದ್ದರಿಂದ, ಈದ್ ಮತ್ತು ಜುಮುಅ ಒಂದೇ ದಿನದಲ್ಲಿ ಒಟ್ಟುಗೂಡಿದರೆ, ಈದ್ ನಮಾಝ್ ನಿರ್ವಹಿಸಿದ ನಂತರ ಒಂದು ವೇಳೆ ಜುಮುಅ ನಮಾಝ್ ನಿರ್ವಹಿಸದಿದ್ದರೆ ಝುಹರ್ ನಮಾಝನ್ನು ಅದರ ಸಮಯದಲ್ಲಿ ನಿರ್ವಹಿಸಬೇಕು.**

---

ನಮಾಝ್ ಮತ್ತು ಉಪವಾಸವು ಆರಾಧನೆಯ ಭೌತಿಕ ಕ್ರಿಯೆಗಳಾಗಿವೆ, ಆದ್ದರಿಂದ ಅವರ ಪ್ರತಿಫಲವು ಈ ಆರಾಧನೆಯ ಕಾರ್ಯಗಳನ್ನು ನಿರ್ವಹಿಸುವ ವ್ಯಕ್ತಿಯನ್ನು ತಲುಪುತ್ತದೆ.

ಆದ್ದರಿಂದ, ನಮ್ಮ ಪ್ರಕಾರ, ಸತ್ತವರ ಪರವಾಗಿ ನಮಾಝ್ ನಿರ್ವಹಿಸುವುದು ಮತ್ತು ಉಪವಾಸ ಮಾಡುವುದು ಸತ್ತವರ ಮಕ್ಕಳ ಜವಾಬ್ದಾರಿಯಲ್ಲ

ಆದಾಗ್ಯೂ, ಸತ್ತವರ ಪರವಾಗಿ ಅಲ್ಲಾಹನ ಸೃಷ್ಟಿಗೆ ಪ್ರಯೋಜನವನ್ನು ನೀಡುವ ಏನನ್ನಾದರೂ ಕೆಲಸ ಮಾಡಿದರೆ ಅದು ಸದಖ ಜಾರಿಯ ಎಂದು ಪರಿಗಣಿಸಲಾಗುತ್ತದೆ, ಅದರ ಪ್ರತಿಫಲವು ಸತ್ತವರಿಗೆ ತಲುಪುತ್ತದೆ.

ಹದೀಸ್ ಗ್ರಂಥಗಳಲ್ಲಿ, ಹಝ್ರತ್ ಆಯಿಷಾ(ರ) ಮತ್ತು ಹಝ್ರತ್ ಇಬ್ನ್ ಅಬ್ಬಾಸ್(ರ) ಅವರು ಸತ್ತವರ ಪರವಾಗಿ ಉಪವಾಸ ಮಾಡ ಬೇಡಿ ಎಂಬ ವರದಿಗಳು ದೊರೆಯುತ್ತದೆ ಆದರೆ ಅವರ ಪರವಾಗಿ ಆಹಾರ ತಿನ್ನಿಸಿರಿ ಎಂಬ ಉಲ್ಲೇಖಗಳಿವೆ.

## ಸಯ್ಯಿದುನಾ ಹಝ್ರತ್ ಅಮೀರುಲ್ ಮೊಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರಿಗೆ ಕೇಳಲಾದ ಪ್ರಶ್ನೆಗಳಿಗೆ ವಿಶ್ವಾಸ ವರ್ಧಕ ಉತ್ತರಗಳು

**ಗಮನಿಸಿ:** ಸಯ್ಯಿದುನಾ ಹಝ್ರತ್ ಅಮೀರಲ್ ಮೊಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರಿಗೆ ವಿವಿಧ ಸಂದರ್ಭಗಳಲ್ಲಿ ಪತ್ರಗಳಲ್ಲಿ ಹಾಗೂ ಎಂ.ಟಿ.ಎ ಯ ವಿವಿಧ ಕಾರ್ಯಕ್ರಮಗಳಲ್ಲಿ ಪ್ರಮುಖ ಸಮಸ್ಯೆಗಳ ಬಗ್ಗೆ ಕೇಳಲಾದ ಪ್ರಶ್ನೆಗಳ ಬಗ್ಗೆ ನೀಡಿದ ಮಾರ್ಗದರ್ಶನ ಹಾಗೂ ಉತ್ತರಗಳನ್ನು ಓದುಗರ ಅನುಕೂಲಕ್ಕಾಗಿ ಅಲ್-ಫ್ಜಲ್ ಇಂಟರ್ನ್ಯಾಷನಲ್‌ಗೆ ಧನ್ಯವಾದಗಳೊಂದಿಗೆ ಪ್ರಕಟಿಸಲಾಗುತ್ತಿದೆ. (ಸಂಸ್ಥೆ)

**ಪ್ರಶ್ನೆ:** ಹುಝೂರ್ ಅನ್ವರ್(ಅತಬಿಅ) ಅವರ ಸೇವೆಯಲ್ಲಿ ಅರಬ್ ಮಹಿಳೆಯೊಬ್ಬರು ಬರೆದಿದ್ದಾರೆ, ಮಹಿಳೆಯರಿಗೆ ಹುಬ್ಬು ಮತ್ತು ದೇಹದ ಮೇಲೆ ಹಚ್ಚೆ ಹಾಕುವ ವ್ಯವಹಾರವನ್ನು ಮಾಡಲು ಅನುಮತಿ ಇದೆಯೇ? ಎಂದು ಅವರಿಗೆ ಮಹಿಳೆಯೊಬ್ಬರು ಕೇಳಿದ್ದಾರೆ. ಹುಝೂರ್ ಅನ್ವರ್(ಅತಬಿಅ) ಅವರು 27ನೇ ಏಪ್ರಿಲ್ 2021 ರ ಪತ್ರದಲ್ಲಿ ಈ ಕೆಳಗಿನ ಸೂಚನೆಗಳನ್ನು ನೀಡಿದ್ದಾರೆ:

**ಉತ್ತರ:** ಹುಬ್ಬು ಹಾಗೂ ಹಚ್ಚೆ ಹಾಕುವುದನ್ನು ಅನುಮತಿಸಲಾಗುವುದಿಲ್ಲ. ಹದೀಸ್‌ಗಳಲ್ಲಿಯೂ ಇದನ್ನು ನಿಷೇಧಿಸಲಾಗಿದೆ, ಸರ್ವಶಕ್ತನಾದ ಅಲ್ಲಾಹನು ಸೌಂದರ್ಯಕ್ಕಾಗಿ ದೇಹವನ್ನು (tatto) ಚುಚ್ಚುವವರನ್ನು, ಚುಚ್ಚಿಸಿಕೊಳ್ಳುವವರನ್ನು, ಮುಖದ ಮೇಲಿನ ಕೂದಲುಗಳನ್ನು ಪರಚಿಕೊಳ್ಳುವವರನ್ನು, ಮುಂಭಾಗದ ಹಲ್ಲುಗಳಲ್ಲಿ ಅಂತರವನ್ನು ಉಂಟುಮಾಡುವವರನ್ನು ಮತ್ತು ಕೂದಲುಗಳಲ್ಲಿ ತೇಪೆ ಹಾಕಿಸಿಕೊಳ್ಳುವವರು ಹಾಗೂ ತೇಪೆ ಹಾಕುವವರರನ್ನು ಅಲ್ಲಾಹನು ಶಪಿಸಿದ್ದಾನೆ ಅವರು ಅಲ್ಲಾಹನ ಸೃಷ್ಟಿಯಲ್ಲಿ ಬದಲಾವಣೆಯನ್ನು ಸೃಷ್ಟಿಸುತ್ತಾರೆ. (ಸಹೀಹ್ ಬುಖಾರಿ ಕಿತಾಬ್ ಅಲ್-ಲಿಬಾಸ್)

ಇಸ್ಲಾಮಿನ ಪ್ರತಿಯೊಂದು ಆಜ್ಞೆಗಳು ಕೆಲವು ಬುದ್ಧಿವಂತಿಕೆಯನ್ನು ಹೊಂದಿದೆ. ಅಂತೆಯೇ, ಕೆಲವು ಇಸ್ಲಾಮಿಕ್ ಆದೇಶಗಳು ನಿರ್ದಿಷ್ಟ ಹಿನ್ನೆಲೆಯನ್ನು ಹೊಂದಿವೆ, ಈ ಆದೇಶಗಳನ್ನು ಈ ಹಿನ್ನೆಲೆಯ ಹೊರಗೆ ನೋಡಿದರೆ, ಆದೇಶದ ಆಕಾರವು ಬದಲಾಗುತ್ತದೆ. ಪ್ರವಾದಿ(ಸ) ರವರು ಆಗಮಿಸಿದಾಗ, ಜಗತ್ತಿನಲ್ಲಿ ಮತ್ತು ವಿಶೇಷವಾಗಿ ಅರೇಬಿಯನ್ ಪರ್ಯಾಯ ದ್ವೀಪದಲ್ಲಿ, ವಿವಿಧ ರೀತಿಯ ಬಹುದೇವತಾವಾದದ ವಿಷವು ಎಲ್ಲೆಡೆ ಹರಡಿತು, ಮಾನವೀಯತೆಯನ್ನು ಹಿಡಿದಿಟ್ಟುಕೊಳ್ಳುವ ವಿವಿಧ ರೀತಿಯ ತಪ್ಪುಗಳು ಮತ್ತು ಮಹಿಳೆಯರು ಮತ್ತು ಪುರುಷರು ವಿಭಿನ್ನವಾದ ಬಹುದೇವಾರಾಧನೆಯಲ್ಲಿ ತೊಡಗಿದ್ದರು.

ಮೇಲೆ ತಿಳಿಸಿದ ವಿಷಯಗಳ ನಿಷೇಧದ ಆಧಾರದ ಮೇಲೆ ಹದೀಸ್‌ಗಳಲ್ಲಿ ಎರಡು ವಿಷಯಗಳನ್ನು ನಿರ್ದಿಷ್ಟವಾಗಿ ಉಲ್ಲೇಖಿಸಲಾಗಿದೆ. ಒಂದು ಅವುಗಳ ಫಲವಾಗಿ ಅಲ್ಲಾಹನ ಸೃಷ್ಟಿಯಲ್ಲಿ ಬದಲಾವಣೆಯನ್ನು ಉದ್ದೇಶಿಸಲಾಗಿದೆ ಮತ್ತು ಇನ್ನೊಂದು ಸೌಂದರ್ಯವನ್ನು ಸಾಧಿಸುವುದು.

ಈ ಎರಡು ವಿಷಯಗಳನ್ನು ನಾವು ಪರಿಗಣಿಸಿದಾಗ, ಮೊದಲನೆಯದು, ಅಂದರೆ ಅಲ್ಲಾಹನ ಸೃಷ್ಟಿಯಲ್ಲಿನ ಬದಲಾವಣೆ, ಅಲ್ಲಿ ಅದು ಸಾಮಾಜಿಕ ಅನಿಷ್ಟಗಳನ್ನು ಸೂಚಿಸುತ್ತದೆ, ಇದು ಬಹುದೇವತಾ ಕ್ರಿಯೆಗಳನ್ನು ಸಹ ಪ್ರತಿಬಿಂಬಿಸುತ್ತದೆ. ಇದನ್ನು ಹಿರಿತನದ ಸಂಕೇತವಾಗಿ ತೆಗೆದುಕೊಳ್ಳುತ್ತದೆ, ಕೂದಲಲ್ಲಿ ಉದ್ದವಾದ ತೇಪೆಗಳನ್ನು ಹಾಕಿ ತಲೆಯ ಮೇಲೆ ಕೂದಲ ಪಗಡಿಯನ್ನಾಗಿ ಇರಿಸಿ ಅದನ್ನು ಹಿರಿತನದ ಚಿಹ್ನೆಯನ್ನಾಗಿ ಹೇಳುವುದು, ಯಾವುದಾದರು ಪೀರ್ ಅಥವಾ ಗುರುವಿಗಾಗಿ ಕೂದಲನ್ನು ಅರ್ಪಿಸಿ ಅದನ್ನು ಜಡೆ ಮಾಡುವುದು ಅಥವಾ ಬೋದಿಯನ್ನು ಅರ್ಪಣೆಯಾಗಿ ಇಡುವುದು, ಕೂದಲನ್ನು ನಾಲ್ಕು ಭಾಗಗಳಾಗಿ ಕತ್ತರಿಸಿ ಮಧ್ಯದಲ್ಲಿ ರೇಜರ್‌ನಿಂದ ಬೋಳಿಸಿಕೊಂಡು ಅದನ್ನು ಆಶೀರ್ವಾದವೆಂದು ಪರಿಗಣಿಸುತ್ತಾರೆ. ಅದೇ ರೀತಿಯಲ್ಲಿ, ಅನುಗ್ರಹಕ್ಕಾಗಿ ದೇಹ, ಮುಖ ಮತ್ತು ತೋಳು ಇತ್ಯಾದಿಗಳ ಮೇಲೆ ದೇವತೆ, ವಿಗ್ರಹ ಅಥವಾ ಪ್ರಾಣಿಯ ಆಕಾರವನ್ನು ಚುಚ್ಚಿಸಿಕೊಳ್ಳುವುದು. ಇವೆಲ್ಲ ಬಹುದೇವತಾ ವಿಧಾನಗಳಾಗಿದ್ದು ಅವುಗಳ ಹಿಂದೆ ಧಾರ್ಮಿಕ ಮೂಢನಂಬಿಕೆಗಳಿದ್ದವು.

ಎರಡನೆಯದಾಗಿ, ಸೌಂದರ್ಯಕ್ಕಾಗಿ ಇದನ್ನು ಮಾಡುವುದು, ಕೆಲವು ವಿಷಯಗಳಲ್ಲಿ, ಸಾಮಾಜಿಕ ಅನೈತಿಕತೆ ಮತ್ತು ಅಶ್ಲೀಲತೆಯನ್ನು ತೋರಿಸುತ್ತದೆ. ಕಾನೂನುಬದ್ಧ ಮಿತಿಯೊಳಗೆ ವಾಸಿಸುವಾಗ ಒಬ್ಬ ವ್ಯಕ್ತಿಯು ತನ್ನ ಸೌಂದರ್ಯಕ್ಕಾಗಿ ಯಾವುದೇ ಕಾನೂನುಬದ್ಧ ವಿಧಾನವನ್ನು ಅಳವಡಿಸಿಕೊಳ್ಳುವುದನ್ನು ನಿಷೇಧಿಸಲಾಗಿಲ್ಲ. ಆದ್ದರಿಂದ, ಒಂದು ಹದೀಸಿನಲ್ಲಿ ಒಬ್ಬ ವ್ಯಕ್ತಿಯು ಹೇಳಿದನು ನನಗೆ ಚೆನ್ನಾಗಿ ಕಾಣುವುದು ಮತ್ತು ನಾನು ಬಯಸುವುದೇನೆಂದರೆ ನನ್ನ ಬಟ್ಟೆ ಚೆನ್ನಾಗಿರಲಿ, ನನ್ನ ಬೂಟುಗಳು ಚೆನ್ನಾಗಿರಲಿ, ಇದು ಅಹಂಕಾರದಲ್ಲಿ ಸೇರಿದೆಯೇ? ಅದಕ್ಕೆ ಪ್ರವಾದಿ(ಸ) ನುಡಿದರು: "ಇದು ಅಹಂಕಾರವಲ್ಲ." ಸತ್ಯವನ್ನು ನಿರಾಕರಿಸುವ ಮತ್ತು ಇತರರನ್ನು ಧಿಕ್ಕರಿಸುವ ಹೆಸರೇ ಅಹಂಕಾರವಾಗಿದೆ. ಮತ್ತು ಇದರೊಂದಿಗೆ, ಪವಿತ್ರ ಪ್ರವಾದಿ(ಸ) ನುಡಿದರು **ಇನ್ನಲ್ಲಾಹ ಜಮೀಲುನ್ ಯುಹಿಬ್ಬುಲ್ ಜವಾಲ** ಅಂದರೆ ಅಲ್ಲಹನು ಸುಂದರ ಮತ್ತು ಸೌಂದರ್ಯವನ್ನು ಪ್ರೀತಿಸುತ್ತಾನೆ. (ಸಹೀಹ್ ಮುಸ್ಲಿಂ, ಕಿತಾಬುಲ್ ಈಮಾನ್, ಅಧ್ಯಾಯ ತಹ್ರೀಮ್ ಅಲ್-ಕಿಬ್ರ್ ವ ಬಯಾನಿಹಿ) ಹಾಗೆಯೇ, ಹದೀಸ್‌ಗಳಲ್ಲಿ ಹುಡುಗಿಯರನ್ನು ಮದುವೆಯಾಗುವಾಗ, ಆ ಕಾಲದ ವಿಧಾನಗಳ ಪ್ರಕಾರ ಅವರನ್ನೂ ಅಲಂಕರಿಸಿ ಸುಂದರಗೊಳಿಸಲಾಯಿತು ಎಂದು ಉಲ್ಲೇಖಿಸಲಾಗಿದೆ. (ಸಹೀಹ್ ಅಲ್-ಬುಖಾರಿಮ, ಕಿತಾಬ್ ಅಲ್-ಹಿಬ್ಬಾ ವಾ ಫದ್ಲಾಹಾ ವಾ ಅಲ್-ತಹ್ರಿದ್ ಅಲ್-ಅಲಿಹಾ ಅಧ್ಯಾಯ ಅಲ್‌ಇಸ್ತಿಯಾರ ಲಿಲ್‌ಉರೂಸ್ ಇಂದಲ್ ಬಿನಾ) (ಫತ್‌ಹಲ್ ಬಾರಿ ಶರಹ್ ಸಹೀಹ್ ಬುಖಾರಿ, ಇತಾಬುನ್ನಿಕಾಹ್)

ಆದ್ದರಿಂದ, ಯಾವ ಸೌಂದರ್ಯವನ್ನು ಸಾಧಿಸುವುದಕ್ಕೆ ಪವಿತ್ರ ಪ್ರವಾದಿ(ಸ) ರವರು ಶಾಪದ ರೀತಿಯಲ್ಲಿ ಎಚ್ಚರಿಸಿದಾಗ, ಅದರ ಬಗ್ಗೆ ಖಂಡಿತವಾಗಿಯೂ ಇನ್ನೊಂದು ಅರ್ಥವನ್ನು ಹೊಂದಿರುತ್ತದೆ. ಆದ್ದರಿಂದ, ಈ ವಿಷಯದಲ್ಲಿ ನಾವು ಈ ಹದೀಸ್‌ಗಳನ್ನು ಪರಿಗಣಿಸಿದಾಗ, ಈ

ವಸ್ತುಗಳ ನಿಷೇಧದ ಜೊತೆಗೆ, ಬನೀ ಇಸ್ರಾಈಲ್ ರವರು ಯಾವಾಗ ನಾಶವಾದರು ಎಂದರೆ ಅವರ ಮಹಿಳೆಯರು ಅಂತಹ ಕೆಲಸಗಳನ್ನು ಮಾಡಲು ಪ್ರಾರಂಭಿಸಿದಾಗ ಎಂದು ಪವಿತ್ರ ಪ್ರವಾದಿ(ಸ) ರವರು ಹೇಳಿದ್ದಾರೆ. ಪ್ರವಾದಿ ಮುಹಮ್ಮದ್(ಸ) ಅವರ ಆಗಮನದ ಸಮಯದಲ್ಲಿ, ಯಹೂದಿಗಳಲ್ಲಿ ಅಶ್ಲೀಲತೆಯು ಸಾಮಾನ್ಯವಾಗಿತ್ತು ಮತ್ತು ಮದೀನಾದಲ್ಲಿ ಅನೇಕ ವೇಶ್ಯಾಗೃಹಗಳು ಇದ್ದವು, ಅದರಲ್ಲಿ ತೊಡಗಿರುವ ಮಹಿಳೆಯರು ಪುರುಷರನ್ನು ಆಕರ್ಷಿಸಲು ಇಂತಹ ತಂತ್ರಗಳನ್ನು ಬಳಸಿದರು, ಆದ್ದರಿಂದ ಪ್ರವಾದಿ(ಸ) ರವರು ಈ ಕೃತ್ಯಗಳನ್ನು ಖಂಡಿಸಿ ಆ ಸಮಯದಲ್ಲಿ ಮುಮಿನರಿಗೆ ಹಾಗೆ ಮಾಡುವುದರಿಂದ ನಿಷೇಧಿಸಿದರು.

ಆದ್ದರಿಂದ, ಈ ವಸ್ತುಗಳ ನಿಷೇಧದಲ್ಲಿ, ಅವುಗಳ ಪರಿಣಾಮವಾಗಿ, ಮನುಷ್ಯನ ದೈಹಿಕ ಸ್ಥಿತಿಯಲ್ಲಿ ಅಂತಹ ಕೃತಕ ಬದಲಾವಣೆಯು ಸಂಭವಿಸಿದರೆ, ಪುರುಷ ಮತ್ತು ಮಹಿಳೆಯ ನಡುವಿನ ವ್ಯತ್ಯಾಸವನ್ನು ಸರ್ವಶಕ್ತನಾದ ಅಲ್ಲಾಹನು ಮಾನವರಲ್ಲಿ ಸೃಷ್ಟಿಸಿದ ವ್ಯತ್ಯಾಸವು ಕೊನೆಗೊಳ್ಳುತ್ತದೆ ಅಥವಾ ಈ ರೀತಿಯ ಕೃತ್ಯದಿಂದ ಅತೀ ದೊಡ್ಡ ಪಾಪವಾದ ಶಿರ್ಕ್‌ನ ಕಡೆಗೆ ಪ್ರಚೋದನೆಯ ಭಯವಿದ್ದರೆ ಅಥವಾ ಈ ರೀತಿಯ ಕೃತ್ಯದಿಂದ ತನ್ನ ಕಡೆಗೆ ವಿರುದ್ಧ ಲಿಂಗವನ್ನು ಪ್ರಚೋದಿಸುವ ಸಲುವಾಗಿ ನಡೆಸಿದರೆ, ಆಗ ಈ ಎಲ್ಲಾ ಕ್ರಿಯೆಗಳು ಕಾನೂನುಬಾಹಿರ ಮತ್ತು ದೋಷಾರೋಪಣೆಗೆ ಅರ್ಹವೆಂದು ಘೋಷಿಸಲಾಗುವುದು.

ಹಾಗಾಗಿ, ಹಚ್ಚೆ (Tatto) ಹಾಕಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ, ಅದು ಪುರುಷನಾಗಿರಲಿ ಅಥವಾ ಮಹಿಳೆಯಾಗಿರಲಿ, ಅದರ ಹಿಂದಿರುವ ಏಕೈಕ ಉದ್ದೇಶವೆಂದರೆ ಅದನ್ನು ಪ್ರದರ್ಶಿಸುವುದು ಮತ್ತು ವಿರುದ್ಧ ಲಿಂಗವನ್ನು ನಿಮ್ಮ ಕಡೆಗೆ ಅನ್ಯಾಯವಾಗಿ ಆಕರ್ಷಿಸುವುದಾಗಿತ್ತದೆ. ಅದಕ್ಕಾಗಿಯೇ ಜನರು ಸಾಮಾನ್ಯವಾಗಿ ದೇಹದ ಭಾಗಗಳಲ್ಲಿ ಹಚ್ಚೆ ಹಾಕಿಸಿಕೊಳ್ಳುತ್ತಾರೆ, ಅದನ್ನು ಅವರು ಸಾರ್ವಜನಿಕವಾಗಿ ಬಹಿರಂಗಪಡಿಸಬಹುದು. ಆದರೆ ಯಾರಾದರು ದೇಹದ ಗುಪ್ತ ಭಾಗದ ಮೇಲೆ ಯಾರಾದರೂ ಹಚ್ಚೆ ಹಾಕಿಸಿಕೊಂಡರೆ ಅದರ ಹಿಂದೆಯೂ ಅದೇ ಆಲೋಚನೆ ಇರುತ್ತದೆ ಅಂದರೆ ಇದರಿಂದ ಕೆಟ್ಟ ಕಾರ್ಯಗಳು ಮಾಡಿದರೆ, ಈ ಗುಪ್ತ ಭಾಗಗಳಲ್ಲಿ ಮಾಡಿದ ಹಚ್ಚೆಯನ್ನು ವಿರುದ್ಧ ಲಿಂಗದ ಮುಂದೆ ಪ್ರದರ್ಶಿಸಬಹುದು ಎಂದಾಗಿರುತ್ತದೆ. ಈ ಎರಡೂ ವಿಧಾನಗಳು ಕಾನೂನುಬಾಹಿರವಾಗಿವೆ ಏಕೆಂದರೆ ಅವು ಇಸ್ಲಾಮಿಕ್ ಬೋಧನೆಗಳಿಗೆ ವಿರುದ್ಧವಾಗಿವೆ.

ಇದಲ್ಲದೆ, ಹಚ್ಚೆಗಳು ಅನೇಕ ದೈಹಿಕ ಮತ್ತು ವೈದ್ಯಕೀಯ ಅನಾನುಕೂಲಗಳನ್ನು ಹೊಂದಿವೆ. ಆದ್ದರಿಂದ, ಹಚ್ಚೆ ಹಾಕಿದ ದೇಹದ ಭಾಗಗಳಲ್ಲಿ ಚರ್ಮದ ಅಡಿಯಲ್ಲಿ ಬೆವರು ಗ್ರಂಥಿಗಳು ಕೆಟ್ಟದಾಗಿ ಪರಿಣಾಮ ಬೀರುತ್ತವೆ ಮತ್ತು ಹಚ್ಚೆ ಹಾಕಿದ ನಂತರ, ದೇಹದ ಆ ಭಾಗಗಳಲ್ಲಿ ಬೆವರು ಕಡಿಮೆಯಾಗುತ್ತದೆ, ಇದು ವೈದ್ಯಕೀಯವಾಗಿ ಹಾನಿಕಾರಕವಾಗಿದೆ. ಅಂತೆಯೇ, ಕೆಲವು ರೀತಿಯ ಟ್ಯಾಟೂಗಳು ದೇಹದ ಶಾಶ್ವತ ಅಂಗವಾಗುವುದರಿಂದ, ದೇಹವು ಬೆಳೆದಂತೆ ಅಥವಾ ಕುಗ್ಗಿದಾಗ ಟ್ಯಾಟೂವಿನ ಆಕಾರವು ಸಹ ಬದಲಾಗುತ್ತದೆ, ಟ್ಯಾಟೂವು ಒಳ್ಳೆಯದಕ್ಕಿಂತ ಕೊಳಕು ಎಂದು ತೋರುತ್ತದೆ, ಕೆಲವು ವ್ಯಕ್ತಿಗ:ಳು ಅದನ್ನು ಬಹಳ ಕೆಟ್ಟದ್ದು ಎಂದು ಭಾವಿಸುತ್ತಾರೆ ಆದರೆ ಅದನ್ನು ತೊಡೆದುಹಾಕುವುದು ಸಾಧ್ಯವಿಲ್ಲ. ಆದ್ದರಿಂದ, ಈ ಕಾರಣಗಳಿಂದಾಗಿ ಹಚ್ಚೆ ಹಾಕಿಸಿಕೊಳ್ಳುವುದು ಒಂದು ವ್ಯರ್ಥ ಕೆಲಸವಾಗಿದೆ.

ಉಳಿದಂತೆ, ತಮ್ಮ ಕಾನೂನುಬದ್ಧ ಮತ್ತು ಇಸ್ಲಾಮಿಕ್ ಮಿತಿಗಳಲ್ಲಿ ವಾಸಿಸುವ ಮಹಿಳೆಯರ ಹುಬ್ಬುಗಳಿಗೆ ಸಂಬಂಧಿಸಿದಂತೆ, ಈ ದುಷ್ಕೃತ್ಯಗಳ ಹಿನ್ನೆಲೆಯಲ್ಲಿ ಮುಮಿನ್ ಮಹಿಳೆಯರು ಈ ಕೆಲಸಗಳನ್ನು ಮಾಡುವುದನ್ನು ಪ್ರವಾದಿ(ಸ) ನಿಷೇಧಿಸಿದರು. ಆದರೆ ನೋವು ಅಥವಾ ಅನಾರೋಗ್ಯದ ಕಾರಣದಿಂದ ವಿನಾಯಿತಿಯನ್ನು ನೀಡಿದ್ದಾರೆ. ಆದ್ದರಿಂದ, ಹಝ್ರತ್ ಅಬ್ದುಲ್ಲಾ ಬಿನ್ ಮಸೂದ್(ರ) ಅವರಿಂದ ವರದಿಯಾಗಿದೆ **ಸಮಿಅ್‌ತು ರಸೂಲಲ್ಲಾಹಿ ಸಲ್ಲಲ್ಲಾಹು ಅಲೈಹಿವಸಲ್ಲಮ ನಹಾ ಅನ್ನಾಮಿಸತಿ ವಲ್‌ವಾಶಿರತಿ ವಲ್‌ವಾಸಿಲತಿ ವಲ್‌ವಾಶಿಮತಿ ಇಲ್ಲಾ ಮಿನ್ ದಾಇನ್** (ಮಸ್ನದ್ ಅಹ್ಮದ್ ಬಿನ್ ಹಂಬಲ್) ಅಂದರೆ ನಾನು ಪ್ರವಾದಿ(ಸ) ಅವರು ಕೂದಲು ಕೀಳುವ ಸಾಧನೆಯಿಂದ ಕೂದಲುಗಳನ್ನು ಕೀಳುವವರು, ಹಲ್ಲುಗಳನ್ನು ಹರಿತಗೊಳಿಸುವವರು, ಕೃತಕ ಕೂದಲುಗಳನ್ನು ಹಾಕಿಕೊಳ್ಳುವುದು ಮತ್ತು ದೇಹದ ಮೇಲೆ ಹಚ್ಚೆ ಹಾಕಿಸಿಕೊಳ್ಳಲು ನಿಷೇಧಗೊಳಿಸುವುದನ್ನು ನಾನು ಕೇಳಿದೆ. ಆದರೆ ಯಾವುದಾದರು ಕಾಯಿಲೆ ಇದ್ದಲ್ಲಿ ಅದನ್ನು ಅನುಮತಿಸಲಾಗಿದೆ.

ಇಸ್ಲಾಂ ನಿಯ್ಯತ್ತುಗಳ ಮೇಲೆ ಕ್ರಿಯೆಗಳ ಔಷಧವನ್ನು ಇರಿಸಿದೆ. ಆದ್ದರಿಂದ, ಈ ಯುಗದಲ್ಲಿ, ಮಹಿಳೆಯರು ಕಾನೂನುಬದ್ಧ ರೀತಿಯಲ್ಲಿ ಮತ್ತು ನ್ಯಾಯಸಮ್ಮತ ಉದ್ದೇಶಕ್ಕಾಗಿ ಈ ವಸ್ತುಗಳ ಲಾಭವನ್ನು ಪಡೆದರೆ, ಇದರಲ್ಲಿ ಯಾವುದೇ ತೊಂದರೆ ಇಲ್ಲ. ಆದರೆ ಈ ಕ್ರಿಯೆಗಳ ಪರಿಣಾಮವಾಗಿ ದುಷ್ಟತನದ ಕಡೆಗೆ ಒಲವು ಕಂಡುಬಂದರೆ, ಬಹುದೇವತಾ ಆಚರಣೆಯ ಅಭಿವ್ಯಕ್ತಿಯಾದರೆ ಅಥವಾ ಇಸ್ಲಾಂನ ಸ್ಪಷ್ಟ ಆದೇಶಕ್ಕೆ ಅವಿಧೇಯತೆಯನ್ನು ಕಂಡರೆ, ಉದಾಹರಣೆಗೆ, ಈ ಯುಗದಲ್ಲಿಯೂ ಸಹ, ಮಹಿಳೆಯರು ತಮ್ಮನ್ನು ಸ್ವಚ್ಛಗೊಳಿಸುವಾಗ ಅಥವಾ ವ್ಯಾಕ್ಸಿಂಗ್ ಮಾಡುವಾಗ ಮುಸುಕು ಧರಿಸದಿದ್ದರೆ ಮತ್ತು ಅನ್ಯ ಮಹಿಳೆಯರ ಮುಂದೆ ಅವರ ಅಶ್ಲೀಲತೆ ಬಹಿರಂಗಪಡಿಸಿದರೆ, ಈ ಕೆಲಸವನ್ನು ಪವಿತ್ರ ಪ್ರವಾದಿ(ರ)ರವರ ಅದೇ ಎಚ್ಚರಿಕೆಯ ಅಡಿಯಲ್ಲಿ ಪರಿಗಣಿಸಲಾಗುತ್ತದೆ. ಮತ್ತು ಇದನ್ನು ಅನುಮತಿಸಲಾಗುವುದಿಲ್ಲ.

ಅದೇ ರೀತಿ, ಈ ಸಂದರ್ಭದಲ್ಲಿ, ಕಿಡಿಗೇಡಿತನವನ್ನು ಕೊಲೆಗಿಂತ ದೊಡ್ಡ ಪಾಪವೆಂದು ಘೋಷಿಸುವ ಮೂಲಕ ಕಿಡಿಗೇಡಿತನವನ್ನು ನಿಲ್ಲಿಸಲು ಸರ್ವಶಕ್ತನಾದ ಅಲ್ಲಾಹನು ಆದೇಶಿಸಿದ್ದಾನೆ ಎಂಬುದನ್ನು ಸಹ ನೆನಪಿನಲ್ಲಿಡಬೇಕು. ಮತ್ತು ಕೆಲವು ಉದಾಹಣೆಗಳು ಕಂಡುಬರುವುದೇನೆಂದರೆ ಮದುವೆಯ ನಂತರ ಸಂಬಂಧಗಳು ಕೊನೆಗೊಂಡ ಅಥವಾ ವಿಚ್ಛೇದನಗಳು ನಡೆದಿವೆ ಅದಕ್ಕೆ ಕಾರಣ ಗಂಡನಿಗೆ ಹೆಂಡತಿಯ ಮುಖದ ಮೇಲೆ ಕೂದಲು ಇವೆ ಎಂದು ನಂತರ ತಿಳಿದುಬಂತು. ಕೆಲವು ಕೂದಲನ್ನು ಸ್ವಚ್ಛಗೊಳಿಸದಿದ್ದರೆ ಅಥವಾ ಎಳೆಯದಿದ್ದರೆ, ಅದು ಹೆಚ್ಚು ಮನೆಗಳನ್ನು ಹಾಳುಮಾಡುತ್ತದೆ. ಇಷ್ಟವಿಲ್ಲದಿರುವಿಕೆಗಳ ದೀರ್ಘ ಸರಣಿ ಪ್ರಾರಂಭವಾಗುತ್ತದೆ. ಮತ್ತು ಈ ಆಜ್ಞೆಯೊಂದಿಗೆ ಪವಿತ್ರ ಪ್ರವಾದಿ(ಸ) ಅವರ ಉದ್ದೇಶವು ಸಮಾಜದಲ್ಲಿ ಅಂತಹ ಪರಿಸ್ಥಿತಿ ಉಂಟಾಗುತ್ತದೆ, ಇದರ ಪರಿಣಾಮವಾಗಿ ಮನೆಗಳಲ್ಲಿ ಗಲಭೆಗಳು ಹರಡುತ್ತವೆ ಎಂದು ಹೇಳಲಾಗುವುದಿಲ್ಲ. ಇಂತಹ ಕಟುವಾದ ಮಾತುಗಳನ್ನು ಹೇಳುವುದರಲ್ಲಿ ಕಾಣುವ ಜಾಣತನವೇನೆಂದರೆ ಬಹುದೇವಾರಾಧನೆಯು ಮಹಾಪಾಪವಾಗಿದೆ ಮತ್ತು ಈ ಮಾತುಗಳನ್ನು ದೇವಾನುದೇವತೆಗಳು ಇತ್ಯಾದಿಗಳ ಸಲುವಾಗಿ ತೆಗೆದುಕೊಂಡಿರುವದರಿಂದ ಅಥವಾ ಅಶ್ಲೀಲತೆಯು ಪ್ರಚುರಪಡಿಸಲ್ಪಟ್ಟುದರಿಂದ ನೀವು(ಸ)ರವರು ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದರು. ಅದರೊಂದಿಗೆ ಬಲವಾದ ಪದಗಳಲ್ಲಿ ಖಂಡಿಸಿದ್ದಾರೆ ಹೀಗೆ ಬಹುದೇವತಾ ಪದ್ಧತಿಗಳು ಮತ್ತು ಅಶ್ಲೀಲತೆಯನ್ನು ಖಂಡಿಸಿದ್ದಾರೆ.

(ಸಂಕಲನಕಾರರಿಂದ ಗಮನಿಸಿ: ಮೇಲಿನ ಉತ್ತರದ ಕೆಲವು ಭಾಗಗಳನ್ನು ಕೆಲವು ಪ್ರಶ್ನೆಗಳಿಗೆ ಪ್ರತಿಕ್ರಿಯೆಯಾಗಿ ಈಗಾಗಲೇ ವಿವಿಧ ಸಂಚಿಕೆಗಳಲ್ಲಿ ಪ್ರಕಟಿಸಲಾಗಿದೆ. ಆದರೆ ಇಲ್ಲಿ, ಸಂಪೂರ್ಣ ಮತ್ತು ಏಕೀಕೃತ ರೂಪದಲ್ಲಿ, ಹುಝೂರ್ ಅನ್ವರ್(ಅತಬಿಅ) ಅವರು ಮೇಲಿನ ಪ್ರಶ್ನೆಗೆ ನೀಡಿದ ಉತ್ತರವಾಗಿದೆ ಇದು ಓದುಗರ ಹಿತಾದೃಷ್ಟಿಯಿಂದ ಪ್ರಕಟಿಸಲಾಗಿದೆ)

**ಪ್ರಶ್ನೆ:** ಗೌರವಾನ್ವಿತ ನಾಝಿಮ್ ಸಾಹಿಬ್ ದಾರುಲ್-ಇಫ್ತಾ ಅವರು ಜುಮುಅ ನಮಾಝ್ ಅಥವಾ ಝುಹರ್ ನಮಾಝ್ ಅನ್ನು ಈದ್ ಮತ್ತು ಜುಮುಅ ಒಂದೇ ದಿನದಲ್ಲಿ ಒಟ್ಟುಗೂಡಿದಾಗ ಈದ್ ಪ್ರಾರ್ಥನೆಯನ್ನು ನಿರ್ವಹಿಸುವ ಬಗ್ಗೆ ವರದಿಗೆ ಪ್ರತಿಕ್ರಿಯೆಯಾಗಿ, ಹುಝೂರ್ ಅನ್ವರ್(ಅತಬಿಅ) ಅವರ 16 ಮೇ 2021 ದಿನಾಂಕದ ಪತ್ರದಲ್ಲಿ ಈ ವಿಷಯದ ಕುರಿತು ಕೆಳಗಿನ ತತ್ವ ಸೂಚನೆಗಳನ್ನು ನೀಡಿದರು. ಹುಝೂರ್ ಅನ್ವರ್(ಅತಬಿಅ) ಹೇಳಿದರು:

**ಉತ್ತರ:** ಈದ್ ಮತ್ತು ಜುಮುಅವನ್ನು ಒಂದೇ ದಿನದಲ್ಲಿ ಒಟ್ಟುಗೂಡಿಸಿದಾಗ, ಈದ್ ನಮಾಝ್ ನಿರ್ವಹಿಸಿದ ನಂತರ, ಆ ದಿನದಂದು ಜುಮುಅ ನಮಾಝ್ ಮತ್ತು ಝುಹರ್ ನಮಾಝ್ ಎರಡನ್ನೂ ನಿರ್ವಹಿಸದಿರುವ ಬಗ್ಗೆ ಕೇವಲ ಹಝ್ರತ್ ಅಬ್ದುಲ್ಲಾ ಬಿನ್ ಝುಬೈರ್(ರ) ಅವರ ನಿಲುವು ಮತ್ತು ಅಭ್ಯಾಸ ಇರುತ್ತದೆ. ಮತ್ತು ಅದು ಕೂಡ ಒಂದು ಮಖ್ದೂ ವರದಿಯ ಮೇಲೆ ಆಧಾರಿತವಾಗಿದೆ ಮತ್ತು ಈ ವರದಿಯ ಇಬ್ಬರು ವರದಿಗಾರರ ಹೇಳಿಕೆಯಲ್ಲಿ ವಿರೋಧಾಭಾಸವೂ ಇದೆ. ಅಧಿಕೃತ ಮತ್ತು ವಿಶ್ವಾಸಾರ್ಹ ಸಂಪ್ರದಾಯಗಳಲ್ಲಿ, ಪ್ರವಾದಿ(ಸ) ಅವರ ಸುನ್ನತ್ ಮತ್ತು ಅವರ ಖಲೀಫರು ಮತ್ತು ಪ್ರವಾದಿ(ಸ) ಅವರ ಸಹಾಬರವರು ಅದೇ ನಿಲುವನ್ನು ಕಂಡುಕೊಳ್ಳುತ್ತಾರೆ, ಅವರೆಲ್ಲರೂ ಈದ್ ಪ್ರಾರ್ಥನೆಯನ್ನು ಮಾಡಿದ ನಂತರ ಆ ದಿನದಂದು ಜುಮುಅದ ನಮಾಝನ್ನು ನಿರ್ವಹಿಸಿದರು. ಮತ್ತು ದೂರದ ಪ್ರದೇಶಗಳಿಂದ ಬರುವವರಿಗೆ ಜುಮುಅದಿಂದ ಬಿಡುವು ನೀಡಿ, ಅವರು ತಮ್ಮ ಪ್ರದೇಶಗಳಲ್ಲಿ ಝುಹರ್ ನಮಾಝ್ ನಿರ್ವಹಿಸಲು ಸೂಚಿಸಿದರು. ಮತ್ತು ಕೆಲವು ಸಂದರ್ಭಗಳಲ್ಲಿ, ಈದ್ ಪ್ರಾರ್ಥನೆಯ ನಂತರ ಜುಮುಅವನ್ನು ನಿರ್ವಹಿಸಲಿಲ್ಲ, ಆದರೆ ಝುಹರ್ ನಮಾಝನ್ನು ಖಂಡಿತವಾಗಿಯೂ ಅದರ ಸಮಯಕ್ಕೆ ನಿರ್ವಹಿಸಲಾಯಿತು.

ಈ ನಿಲುವನ್ನು ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಅವರ ಖಲೀಫರಲ್ಲಿ ನೋಡುತ್ತೇವೆ. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ)ರವರ ಒಂದು ಬಾರಿಯ ಕ್ರಿಯೆಯನ್ನು

ಹೊರತುಪಡಿಸಿ, ಅವರು ಹಝ್ರತ್ ಅಬ್ದುಲ್ಲಾ ಬಿನ್ ಝುಬೈರ್(ರ) ಅವರ ಅದೇ ವರದಿಯನ್ನು ಅನುಸರಿಸಿದಾಗ, ಅವರು ಈದ್ ನಮಾಝುನ್ನು ನಿರ್ವಹಿಸಿದ ನಂತರ ಜುಮುಅ ಅಥವಾ ಝುಹರ್ ನಮಾಝುನ್ನು ನಿರ್ವಹಿಸಲಿಲ್ಲ.

ಆದರೆ ಹಝ್ರತ್ ಅಬ್ದುಲ್ಲಾ ಬಿನ್ ಝುಬೈರ್(ರ) ಅವರ ಈ ವರದಿಯು ಪವಿತ್ರ ಪ್ರವಾದಿ(ಸ) ಮತ್ತು ಅವರ ಖಲೀಫರ ಯಾವುದೇ ಮಾತುಗಳು ಅಥವಾ ಕಾರ್ಯಗಳನ್ನು ಆಧರಿಸಿಲ್ಲ, ಆದ್ದರಿಂದ ಈ (ಮಖ್ರೂ) ವಿಘಟಿತ ವರದಿಯಿಂದಾಗಿ, ಇದು ವರದಿಗಾರರ ವರದಿಯಲ್ಲಿ ವಿರೋಧಾಭಾಸಗಳನ್ನು ಹೊಂದಿದೆ, ಕಡ್ಡಾಯ ನಮಾಝ್ ಕೈಬಿಡಲಾಗುವುದಿಲ್ಲ. ಆದ್ದರಿಂದ, ಫಿಖ ಅಹ್ಮದೀಯದಿಂದ (ನ್ಯಾಯಶಾಸ್ತ್ರದಿಂದ) ಈ ವರದಿಯನ್ನು ಆಧರಿಸಿದ ಭಾಗವನ್ನು ಅಳಿಸಿ ಮತ್ತು ಫಿಖ ಅಹ್ಮದೀಯ (ನ್ಯಾಯಶಾಸ್ತ್ರ) ದಲ್ಲಿ ಈದ್ ಮತ್ತು ಜುಮುಅ ಒಂದೇ ದಿನದಲ್ಲಿ ಒಟ್ಟುಗೂಡಿದರೆ, ಈದ್ ನಮಾಝಿನ ನಂತರ, ಜುಮುಅದ ನಮಾಝುನ್ನು ಸಲ್ಲಿಸದಿದ್ದರೆ, ಅದರ ಸಮಯದಲ್ಲಿ ಝುಹರ್ ನಮಾಝುನ್ನು ನಿರ್ವಹಿಸಬೇಕು ಎಂದು ಬರೆಯಿರಿ.

**ಪ್ರಶ್ನೆ:** ಹುಝೂರ್ ಅನ್ವರ್(ಅತಬಿಅ) ಅವರ ಸೇವೆಯಲ್ಲಿ ಮಹಿಳೆಯೊಬ್ಬರು ಹನ್ನೆರಡು ಗಂಟೆಯಿಂದ ಒಂದು ಗಂಟೆಯವರೆಗೆ ಮತ್ತು ಸೂರ್ಯ ಉದಯಿಸುವಾಗ ಪವಿತ್ರ ಖುರ್‌ಆನ್ ಅನ್ನು ಏಕೆ ಪಠಿಸಬಾರದು? ಅದಕ್ಕೆ ಹುಝೂರ್ ಅನ್ವರ್(ಅತಬಿಅ) ಅವರು ಮೇ 16, 2021 ರ ತಮ್ಮ ಪತ್ರದಲ್ಲಿ ಈ ಪ್ರಶ್ನೆಗೆ ಈ ಕೆಳಗಿನ ಉತ್ತರವನ್ನು ನೀಡಿದ್ದಾರೆ:

**ಉತ್ತರ:** ನಿಮ್ಮ ಪತ್ರದಲ್ಲಿ ಉಲ್ಲೇಖಿಸಲಾದ ಸಮಯದಲ್ಲಿ ಪವಿತ್ರ ಖುರ್‌ಆನ್ ಓದುವುದನ್ನು ಎಲ್ಲಿಯೂ ನಿಷೇಧಿಸಲಾಗಿಲ್ಲ. ಆದಾಗ್ಯೂ, ದಿನದ ಮೂರು ಸಮಯಗಳಲ್ಲಿ (ಸೂರ್ಯನು ಉದಯಿಸುವಾಗ, ಸೂರ್ಯ ಮುಳುಗಿದಾಗ ಮತ್ತು ಮಧ್ಯಾಹ್ನದ ಸಮಯದಲ್ಲಿ ಸೂರ್ಯನು ತಲೆಯ ಮೇಲಿರುವಾಗ), ಪವಿತ್ರ ಪ್ರವಾದಿ(ಸ) ನಮಾಝುನ್ನು ನಿರ್ವಹಿಸಲು ನಿಷೇಧಿಸಿದರು ಮತ್ತು ಪ್ರವಾದಿ(ಸ) ಈ ನಿಷೇಧದ ಕಾರಣವನ್ನು ಸಹ ವಿವರಿಸಿದ್ದಾರೆ. ಅಂದರೆ, ನಾನು ಹೇಳಿದೆ, ಓ ಅಲ್ಲಾಹನ ಪ್ರವಾದಿಯವರೇ! ಸರ್ವಶಕ್ತನಾದ ಅಲ್ಲಾಹನು ನಿಮಗೆ ಕಲಿಸಿದ ವಿಷಯಗಳ ಬಗ್ಗೆ ಹೇಳಿ ಅದರ ಬಗ್ಗೆ ನನಗೆ ಅರಿವಿಲ್ಲ. ನನಗೆ ನಮಾಝಿನ ಬಗ್ಗೆ ಹೇಳಿ. ಪ್ರವಾದಿ(ಸ) ಹೇಳಿದರು: "ಬೆಳಿಗ್ಗೆ ಪ್ರಾರ್ಥನೆಯನ್ನು ಮಾಡಿ, ನಂತರ ಸೂರ್ಯೋದಯವಾಗುವ ಮತ್ತು ಉದಯಿಸುವವರೆಗೆ ಪ್ರಾರ್ಥನೆಯಿಂದ ದೂರವಿರಿ, ಏಕೆಂದರೆ ಅದು ಉದಯಿಸುವಾಗ, ಅದು ಸೈತಾನನ ಎರಡು ಕೊಂಬುಗಳ ನಡುವೆ ಹೊರಹೊಮ್ಮುತ್ತದೆ, ಮತ್ತು ಆ ಸಮಯದಲ್ಲಿ (ಕುಫ್ಫಾರರು) ಧಿಕ್ಕಾರಿಗಳು ಅದರ ಮುಂದೆ ಸಾಷ್ಟಾಂಗವೆರಗುತ್ತಾರೆ." ನಂತರ ನಮಾಝುನ್ನು ನಿರ್ವಹಿಸಿರಿ, ಏಕೆಂದರೆ ಆ ಸಮಯದಲ್ಲಿ ನಮಾಝ್ ಸಾಕ್ಷಿಯಾಗಿದೆ ಮತ್ತು ನೆರಳು ಈಟಿಯ ಗಾತ್ರಕ್ಕೆ ಕಡಿಮೆಯಾಗುವವರೆಗೆ ಭಾಗವಹಿಸುತ್ತದೆ. ತದನಂತರ ನಮಾಝಿನಿಂದ ದೂರವಿರಿ, ಖಂಡಿತವಾಗಿಯೂ ಆ ಸಮಯದಲ್ಲಿ ನರಕವು ಹೊತ್ತಿಕೊಳ್ಳುತ್ತದೆ. ನಂತರ ನೆರಳು ಕ್ಷೀಣಿಸಿದಾಗ, ನಮಾಝ್ ನಿರ್ವಹಿಸು, ಏಕೆಂದರೆ ಆ ಸಮಯದಲ್ಲಿ ಪ್ರಾರ್ಥನೆಯು ಸಾಕ್ಷಿಯಾಗಿದೆ ಮತ್ತು ನೀವು ಅಸ್ರ್ ನಮಾಝುನ್ನು ನಿರ್ವಹಿಸುವವರೆಗೆ ಹಾಜರಾಗುತ್ತಾರೆ. ತದನಂತರ ಸೂರ್ಯ ಮುಳುಗುವವರೆಗೆ ನಮಾಝಿನಿಂದ ದೂರವಿರಿ, ಏಕೆಂದರೆ ಆ ಸಮಯದಲ್ಲಿ ಸೂರ್ಯನು ಸೈತಾನನ ಎರಡು ಕೊಂಬುಗಳ ನಡುವೆ ಅಸ್ತಮಿಸುತ್ತಾನೆ ಮತ್ತು ಆ ಸಮಯದಲ್ಲಿ ಅವಿಶ್ವಾಸಿಗಳು ಅವನಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತಾರೆ.

ಆದ್ದರಿಂದ ಈ ಮೂರು ಸಮಯದಲ್ಲಿ ಪ್ರಾರ್ಥನೆ ಮಾಡುವುದನ್ನು ನಿಷೇಧಿಸಲಾಗಿದೆ. ಆದರೆ ಪವಿತ್ರ ಖುರ್‌ಆನ್ ಓದಲು ಯಾವುದೇ ನಿಷೇಧವಿಲ್ಲ. ಆದ್ದರಿಂದ, ನೀವು ಬಯಸಿದಾಗ ನೀವು ಖಂಡಿತವಾಗಿಯೂ ಪವಿತ್ರ ಖುರ್‌ಆನ್ ಅನ್ನು ಓದಬಹುದು, ಯಾವುದೇ ನಿರ್ಬಂಧವಿಲ್ಲ.

**ಪ್ರಶ್ನೆ:** ಸ್ನೇಹಿತರೊಬ್ಬರು ಹುಝೂರ್ ಅನ್ವರ್(ಅತಬಿಅ) ಅವರನ್ನು Short Sellingನ ಹಲಾಲ್ ಮತ್ತು ಹರಾಮ್‌ನ ಬಗ್ಗೆ ಮಾರ್ಗದರ್ಶನ ನೀಡುವಂತೆ ಕೇಳಿದ್ದಾರೆ? ಅದಕ್ಕೆ ಹುಝೂರ್ ಅನ್ವರ್(ಅತಬಿಅ) ಅವರು 16 ಮೇ 2021 ರ ಪತ್ರದಲ್ಲಿ ಈ ಕೆಳಗಿನ ಸೂಚನೆಗಳನ್ನು ನೀಡಿದ್ದಾರೆ. ಹುಝೂರ್ ಅನ್ವರ್(ಅತಬಿಅ) ಹೇಳಿದರು:

**ಉತ್ತರ:** ವಾಸ್ತವವಾಗಿ, Short Selling ಅನ್ನು ತ್ವರಿತ ಹಣವನ್ನು ಗಳಿಸುವ ಸುಲಭವಾದ ಮಾರ್ಗವೆಂದು ಪರಿಗಣಿಸಲಾಗುತ್ತದೆ, ಇದರಲ್ಲಿ ಕೆಲವರು ಷೇರುಗಳನ್ನು ದಲ್ಲಾಳಿಗಳಿಂದ ಸಾಲವಾಗಿ ಪಡೆದು ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಾರೆ ಮತ್ತು ನಂತರ ಷೇರುಗಳು ಅಗ್ಗವಾದಾಗ ಮಾರುಕಟ್ಟೆಯಿಂದ ಖರೀದಿಸಿ ದಲ್ಲಾಳಿಗಳಿಗೆ ಹಿಂದಿರುಗಿಸುತ್ತಾರೆ. ಪರಿಣಾಮವಾಗಿ, ಅವರು ಲಾಭದ ಒಂದು ಭಾಗವನ್ನು ಗಳಿಸುತ್ತಾರೆ ಮತ್ತು ದಲ್ಲಾಳಿಗಳಿಗೆ ಒಂದು ಭಾಗವನ್ನು ಕಮಿಷನ್ ಆಗಿ ನೀಡುತ್ತಾರೆ.

ಇಸ್ಲಾಂ ಧರ್ಮವು ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಮನುಷ್ಯನಿಗೆ ಮಾರ್ಗದರ್ಶನ ನೀಡಿದಂತೆ, ಸ್ಪಷ್ಟ ಮತ್ತು ನೇರವಾದ ಮಾರ್ಗವನ್ನು ಹಿಡಿಯಲು ಮತ್ತು ವ್ಯವಹಾರದಲ್ಲಿ ಪ್ರಾಮಾಣಿಕವಾಗಿ ಮತ್ತು ಮೊಂಡುತನದಿಂದ ಮಾತನಾಡಲು ಸೂಚನೆ ನೀಡಿದ್ದಾರೆ. ಆದ್ದರಿಂದ, ನಿಮ್ಮ ವ್ಯವಹಾರದ ಸಾಮಗ್ರಿಗಳಲ್ಲಿ ಯಾವುದೇ ದೋಷವಿದ್ದರೆ ಅದನ್ನು ರಹಸ್ಯವಾಗಿಡಬೇಡಿ ಬದಲಿಗೆ ಈ ದೋಷವನ್ನು ಗ್ರಾಹಕರಿಗೆ ಸ್ಪಷ್ಟವಾಗಿ ತಿಳಿಸಿ ಎಂದು ಪವಿತ್ರ ಪ್ರವಾದಿ(ಸ) ವ್ಯಾಪಾರದ ವಿಷಯದಲ್ಲಿ ಸೂಚನೆ ನೀಡಿದರು. (ಸಾಹಿಹ್ ಮುಸ್ಲಿಂ, ಕಿತಾಬ್ ಅಲ್-ಇಮಾನ್ ಅಧ್ಯಾಯ ಮುನ್ ಘಷ್ನಾ ಫಾಲಿಸ್ ಮಿನ್ನ) ಅಳತೆ ಮತ್ತು ತೂಕಯನ್ನು ಪೂರ್ಣವಾಗಿ ಇರಿಸಿ, ಅದರಲ್ಲಿ ಯಾವುದೇ ಕೊರತೆಯನ್ನು ಮಾಡಬೇಡಿ. ಮತ್ತು ನೀವು ಅವುಗಳನ್ನು ಸ್ವಾಧೀನಪಡಿಸಿಕೊಳ್ಳುವವರೆಗೆ ಸರಕುಗಳನ್ನು ಮಾರಾಟ ಮಾಡಬೇಡಿ. (ಸಾಹಿಹ್ ಅಲ್-ಬುಖಾರಿ, ಕಿತಾಬ್ ಅಲ್-ಬುಯು, ಅಧ್ಯಾಯ ಅಲ್-ಕೈಲ್, ಅಲಿ ಅಲ್-ಬಾಯಿ ವಲ್-ಮತ)

ಆದ್ದರಿಂದ, ಪ್ರತಿ ವ್ಯವಹಾರವನ್ನು ಕೂಲಂಕುಷವಾಗಿ ಸಂಶೋಧನೆ ಮಾಡಿದ ನಂತರ ಮಾಡಬೇಕು, ಇದರಿಂದ ಒಬ್ಬ ವ್ಯಕ್ತಿಯು ಮೋಸಹೋಗುವುದಿಲ್ಲ ಅಥವಾ ಇನ್ನೊಬ್ಬ ವ್ಯಕ್ತಿಯನ್ನು ಮೋಸಗೊಳಿಸುವುದಿಲ್ಲ, ಶಾರ್ಟ್ ಸೆಲ್ಲಿಂಗ್ ವ್ಯವಹಾರದಲ್ಲಿ, ಖರೀದಿದಾರನು ಕಂಪನಿಗಳ ಮಟ್ಟದಲ್ಲಿ ಮತ್ತು ವೈಯಕ್ತಿಕವಾಗಿ ವಂಚನೆಗೊಳಗಾಗುತ್ತಾನೆ. ಬೆಲೆ ಕುಸಿಯುವ ಷೇರುಗಳು ಕೆಲವು ದಿನಗಳ ನಂತರ ಈ ಷೇರುಗಳ ಬೆಲೆ ಕುಸಿದಾಗ, ಅವುಗಳನ್ನು ಅಗ್ಗದ ಬೆಲೆಗೆ ಖರೀದಿಸಲಾಗುತ್ತದೆ ಮತ್ತು ಷೇರುಗಳನ್ನು ಮೂಲ ಮಾಲೀಕರಿಗೆ ಹಿಂತಿರುಗಿಸಲಾಗುತ್ತದೆ ಎಂಬ ಉದ್ದೇಶದಿಂದ ಮಾರಾಟ ಮಾಡಲಾಗುತ್ತದೆ. ಈ ಷೇರುಗಳ ಬೆಲೆ ಕೆಲವೇ ದಿನಗಳಲ್ಲಿ ಕುಸಿಯುತ್ತದೆ ಎಂದು ತಿಳಿದಂತೆ, ಈ ಷೇರುಗಳನ್ನು ಖರೀದಿದಾರನಿಗೆ ಕತ್ತಲೆಯಲ್ಲಿಟ್ಟು ಮಾರಾಟ ಮಾಡಲಾಗುತ್ತದೆ.

ಜೊತೆಗೆ ಶೇರು ಮಾರುಕಟ್ಟೆಗೆ ಸಂಬಂಧಿಸಿದ ವಿವಿಧ ವ್ಯವಹಾರಗಳಲ್ಲಿ ಶಾರ್ಟ್ ಸೆಲ್ಲಿಂಗ್ ಬ್ಯುಸಿನೆಸ್ ಒಂದರ್ಥದಲ್ಲಿ ಜೂಜಿನಂತೆಯೇ ಇರುವುದರಿಂದ ಕೆಲವೊಮ್ಮೆ ಸಣ್ಣ ಮಾರಾಟಗಾರರು ಸ್ವಲ್ಪ ಸಮಯದ ಹಿಂದೆ ಗೇಮ್ ಸ್ವಾಪ್ ರೀತಿಯಲ್ಲಿ ಲಾಭ ಗಳಿಸುವ ಬದಲು ಭಾರಿ ನಷ್ಟವನ್ನು ಅನುಭವಿಸಬೇಕಾಗುತ್ತದೆ. ಷೇರುಗಳ ಸಂದರ್ಭದಲ್ಲಿ.

ಆದ್ದರಿಂದ, ಇಸ್ಲಾಮಿಕ್ ಬೋಧನೆಗಳ ಬೆಳಕಿನಲ್ಲಿ, ಮುಮಿನ್ (ನಂಬಿಕೆಯುಳ್ಳ) ಉದ್ಯಮಿಯು ತನ್ನನ್ನು ತಾನು ಮೋಸಗೊಳಿಸಬಾರದು ಅಥವಾ ಇತರರನ್ನು ಮೋಸಗೊಳಿಸಬಾರದು, ಆದರೆ ಶುದ್ಧವಾಗಿ ವ್ಯಾಪಾರ ಮಾಡುವ ಮೂಲಕ ಆರ್ಥಿಕ ಲಾಭವನ್ನು ಗಳಿಸುವುದು ಮತ್ತು ತನ್ನ ಭಗವಂತನನ್ನು ಮೆಚ್ಚಿಸುವುದು.

**(ಮುಂದುವರಿಯುವುದು)**

***129 ನೇ ಜಲ್ಸಾ ಸಾಲಾನ ಖಾದಿಯಾನ್***
***27, 28, 29 ಡಿಸೆಂಬರ್ 2023ರಂದು ಆಯೋಜಿಸಲಾಗುವುದು***

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 129ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 27, 28 ಮತ್ತು 29ನೇ ಡಿಸೆಂಬರ್ 2024 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

**"ಖಡ್ಗಗಳಿಂದ ಪ್ರದೇಶಗಳನ್ನು ಜಯಿಸಬಹುದು ಆದರೆ ಹೃದಯಗಳನ್ನಲ್ಲ ಬಲದಿಂದ ಶಿರಗಳನ್ನು ಬಾಗಿಸಬಹುದು ಆದರೆ ಮನಸ್ಸುಗಳನ್ನಲ್ಲ"**

(ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಖಲೀಫತುಲ್ ಮಸೀಹ್ ರಾಬಿ(ರ))

**ದುಆವಿನ ಆಕಾಂಕ್ಷಿ:**
**M.B. Nasir Ahmed & Family, Bengaluru, Karnataka**

**ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ. ಆದರೆ ಜನರು ಅದನ್ನು ಅರಿತಿಲ್ಲ.**

(ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್)

**ದುಆವಿನ ಆಕಾಂಕ್ಷಿ:**
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.05, Thursday, 11 July 2024, Issue No. 28

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/-) (WEIGHT: 20-50, grms / issue)

# ಸೈಯಿದುನಾ ಹಝ್ರ‌ತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಸ್ಟ್, ಸೆಪ್ಟೆಂಬರ್ 2023

*(ಬದರ್ ಸಂಚಿಕೆ-27ರ ಉಳಿದ ಭಾಗ ಮುಂದುವರಿಸಲಾಗಿದೆ)*

## ಕೌಟುಂಬಿಕ ಭೇಟಿಗಳು

ಇಂದು ಸಂಜೆಯ ಈ ಅಧಿವೇಶನದಲ್ಲಿ 40 ಕುಟುಂಬಗಳ 136 ಜನರು ತಮ್ಮ ಪ್ರೀತಿಯ ನೇತಾರರೊಡನೆ ಭೇಟಿ ಮಾಡುವ ಭಾಗ್ಯ ಪಡೆದರು. ಹುಝೂರೆ ಅನ್ವರ್(ಅಬಿಅ) ಪ್ರೀತಿಪೂರ್ವಕವಾಗಿ ಶಿಕ್ಷಣಾರ್ಥಿಗಳಿಗೆ ಲೇಖನಿಯನ್ನು ದಯಪಾಲಿಸಿದರು ಮತ್ತು ಸಣ್ಣ ವಯಸ್ಸಿನ ಮಕ್ಕಳಿಗೆ ಸಿಹಿಯನ್ನು ಹಂಚಿದರು.

ಇಂದು ಸಂಜೆಯ ಈ ಅಧಿವೇಶನದಲ್ಲಿ ಜರ್ಮನಿಯ ವಿವಿಧ ಜಮಾಅತುಗಳಿಂದ ಮತ್ತು ನಗರಗಳಿಂದ ಕುಟುಂಬಗಳು ಮತ್ತು ಜಮಾಅತ್ ಬಾಂಧವರು ಭೇಟಿಗಾಗಿ ತಲುಪಿದ್ದರು. ಕೆಲ ಜಮಾಅತ್ ಬಾಂಧವರು ಮತ್ತು ಕುಟುಂಬಗಳು ಬಹುದೂರದ ಪ್ರಯಾಣ ಬೆಳೆಸಿ ಇಲ್ಲಿ ಆಗಮಿಸಿದ್ದರು.

Ulm. Donau ಮತ್ತು Ebingen ಜಮಾಅತಿನಿಂದ ಬಂದವರು ಸುಮಾರು 300 ಕಿ.ಮೀ ಮತ್ತು ಜಮಾಅತ್ Hannover ಯಿಂದ ಬಂದವರು 337 ಕಿ.ಮೀ, Osnabrauck ಯಿಂದ ಬಂದವರು 343 ಕಿ.ಮೀ, Cheminitz ಯಿಂದ ಬಂದವರು 382 ಕಿ.ಮೀ, Jesteburg ಯಿಂದ ಬಂದವರು 462 ಕಿ.ಮೀ ನಷ್ಟು ಉದ್ದದ ಪ್ರಯಾಣ ಮಾಡಿ ಇಲ್ಲಿ ತಲುಪಿದ್ದರು.

ಭೇಟಿ ಮಾಡಲು ಬಂದವರಲ್ಲಿ ಬಹುತೇಕ ಕುಟುಂಬಗಳು ಪಾಕಿಸ್ತಾನದಿಂದ ಬಂದವರಾಗಿದ್ದರು ಮತ್ತು ತನ್ನ ಜೀವನದಲ್ಲಿ ಮೊದಲ ಬಾರಿಗೆ ತಮ್ಮ ಪ್ರೀತಿಯ ನೇತಾರರನ್ನು ಕಾಣಲು ಬಂದಿದ್ದರು.

ಅರ್ಸಲಾನ್ ಅಹ್ಮದ್ ಎಂಬ ಓರ್ವ ಯುವಕರು, ಅವರು ಸಿವಾಲ್ಕೋಟಿನಿಂದ ಬಂದಿದ್ದರು, ಅವರು ಇಲ್ಲಿ Cheminitz ಜಮಾಅತ್‌ನ ಸದಸ್ಯರಾಗಿದ್ದರು, ಅವರು ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸುತ್ತಾರೆ. ನನ್ನ ಹೃದಯದ ಅವಸ್ಥೆಯ ಬಗ್ಗೆ ಕೇಳುವುದು ಬೇಡ, ಹೊರಗಿದ್ದಾಗ ತಾಳ್ಮೆಯಿರಲಿಲ್ಲ, ಏನೆಲ್ಲಾ ಯೋಚನೆ ಮಾಡಿಕೊಂಡಿದ್ದೆ. ಆದರೆ ಒಳಗೆ ಬರುತ್ತಲೇ ಮಾತು ಸಹ ಆಡಲಿಕ್ಕೆ ಬರಲಿಲ್ಲ. ಆದರೆ ಹೃದಯಕ್ಕೆ ಸಮಾಧಾನ ದೊರೆಯಿತು. ಅವರ ತಾಯಿಯು ಜೊತೆಗಿದ್ದರು. ಅವರು ಸಹ ಭಾವವಶರಾಗಿದ್ದರು ಮತ್ತು ಅವರ ನಯನಗಳು ಅಶುಭಂತಾಗಿದ್ದವು.

ಓರ್ವ ಮಿತ್ರರು ಸಿದ್ದೀಖ್ ಅಹ್ಮದ್ ಸಾಹಿಬ್ ಪೇಶಾವರ್‌ದಿಂದ ಆಗಮಿಸಿದ್ದರು. ಹಾಗೆ ನೋಡಿದರೆ ಅವರ ಸಂಬಂಧ ಆಫ್‌ಘಾನಿಸ್ತಾನದಿಂದ ಇತ್ತು. ಹುಝೂರೆ ಅನ್ವರ್(ಅಬಿಅ)ರ ಜೊತೆ ಅವರ ಇದು ಮೊದಲನೆಯ ಭೇಟಿಯಾಗಿತ್ತು. ಇವರು ಸಹ ಭಾವವಶರಾಗಿದ್ದರು ಮತ್ತು ಮಾತನಾಡಲು ಆಗುತ್ತಿರಲಿಲ್ಲ. ಅವರು ತಿಳಿಸಿದರು. ಭೇಟಿಯಾದ ನಾವು ತುಂಬಾ ಪ್ರಾರ್ಥಿಸಿದೆವು. ಭೇಟಿ ಮಾಡಲು ಫೋನ್ ಬಂದಾಗ ತುಂಬಾ ಸಂತೋಷವಾಯಿತು.

ಬಹಾವಲ್‌ನಗರ ಪಾಕಿಸ್ತಾನದಿಂದ ಸಂಬಂಧ ಹೊಂದಿದ ಓರ್ವ ಮಿತ್ರರು ನವೀದ್ ಅಹ್ಮದ್ ಸಾಹಿಬ್ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೇಳಿದರು. ನನಗಂತೂ ಮಾತನಾಡಲು ಸಾಧ್ಯವಾಗುತ್ತಿರಲಿಲ್ಲ. ನನ್ನ ಜೊತೆ ಮಗಳು ಸಹ ಇದ್ದಳು. ಹುಝೂರೆ ಅನ್ವರ್(ಅಬಿಅ) ತುಂಬಾ ಪ್ರೀತಿಯಿಂದ ವ್ಯವಹರಿಸಿದರು ಮತ್ತು ನನ್ನ ಪತ್ನಿಗೆ ಉಂಗುರ ದಯಪಾಲಿಸಿದರು.

ಮಿತ್ರರೊಬ್ಬರು ರಾನ ಖಾಲಿದ್ ಮೊಹಮೂದ್ ಸಾಹಿಬ್ ಕುಟುಂಬ ಸಹಿತ ಹುಝೂರೆ ಅನ್ವರ್(ಅಬಿಅ)ರ ಜೊತೆ ಇದು ಮೊದಲನೆಯ ಭೇಟಿಯಾಗಿತ್ತು. ಅವರು ಹೇಳಿದರು. ನನ್ನ ಪ್ರಾರ್ಥನೆಗಳು ಸ್ವೀಕಾರವಾದವು, ತುಂಬಾ ಸಂತೋಷವಾಯಿತು. ನನ್ನ ಜೀವನದ ಉದ್ದೇಶ ಇಂದು ಪೂರ್ತಿಯಾಯಿತು ಎಂಬ ಅನುಭವವಾಯಿತು. ಈ ಭೇಟಿ ಸಲುವಾಗಿ ಬಹಳಷ್ಟು ಪ್ರಾರ್ಥಿಸಿದ್ದೆ. ಭೇಟಿಯ ಸೂಚನೆ ಸಿಗುತ್ತಿದ್ದಂತೆ ಕೃತಜ್ಞತೆಗಾಗಿ ನಫಲ್ ನಮಾಝ್ ನಿರ್ವಹಿಸಿದೆ. ಹುಝೂರೆ ಅನ್ವರ್(ಅಬಿಅ) ತುಂಬಾ ಪ್ರೀತಿಯ ವ್ಯವಹಾರ ಮಾಡಿದರು. ಉಂಗುರಗಳನ್ನು ನೀಡಿದರು. ಪ್ರಸಾದ ನೀಡಿದರು, ನಾನು 23 ವರ್ಷಗಳಿಂದ ಕಾರ್ಯ ಮಾಡುತ್ತಿದ್ದೇನೆ, ದಿನಾಲೂ ತಹಜ್ಜುದ್ ನಮಾಝ್ ಇರ್ವಹಿಸಿ ಕೆಲಸಕ್ಕೆ ಹೊರಡುತ್ತೇನೆ, ಪ್ರತಿ ನಮಾಝ್‌ನಲ್ಲೂ ಮೊದಲು ಹುಝೂರೆ ಅನ್ವರ್(ಅಬಿಅ) ಅವರಿಗಾಗಿ ಪ್ರಾರ್ಥಿಸುತ್ತೇನೆ. ನಿಮಗೆ ಏನಾದರೂ ಬೇಕಾಗಿದ್ದಲ್ಲಿ ಅಲ್ಲಾಹರೊಡನೆ ಬೇಡಿರಿ, ಅವನ ಮುಂದೆಯೇ ತಲೆಬಾಗಿರಿ, ಅವನು ನಿಮ್ಮ ಬೇಡಿಕೆಗಳನ್ನೆಲ್ಲ ಈಡೇರಿಸುವನು, ಹೊರತು ಈ ಲೋಕದ ಎಲ್ಲಾ ವಸ್ತುಗಳು ಸಾಮಾನುಗಳು ನಶ್ವರವಾಗುವುವು.

ಇನ್ನೋರ್ವ ಮಿತ್ರರು ಇರ್ಫಾನುಲ್ಲ ಸಾಹಿಬ್‌ರವರಿದ್ದರೂ ಸಹ ಕುಟುಂಬ ಸಮೇತ ಇದು ಮೊದಲ ಭೇಟಿಯಾಗಿತ್ತು. ಅವರ ಸಂಬಂಧ ಪಾಕಿಸ್ತಾನದಲ್ಲಿ ಗುಜರಾತ್‌ನಿಂದಿತ್ತು. ಅವರು ಹೇಳಿದರು. ಭಾವನೆಗಳ ಬಗ್ಗೆ ಕೇಳುವುದೇ ಬೇಡ, ಹೃದಯವು ನೂರಕ್ಕಿಂತ ಹೆಚ್ಚು ವೇಗದಿಂದ ಬಡಿತಿತ್ತು. ಹುಝೂರೆ ಅನ್ವರ್(ಅಬಿಅ) ತುಂಬಾ ಪ್ರೀತಿಯಿಂದ ವ್ಯವಹರಿಸಿದರು. ಮಕ್ಕಳಿಗೆ ಸಿಹಿಯನ್ನು ಕೊಟ್ಟರು, ನನಗೆ ಉಂಗುರ ನೀಡಿದರು. ತುಂಬಾ ಸಂತೋಷವಾಯಿತು.

ವಾಜಿದ್ ಅಹ್ಮದ್ ಸಾಹಿಬ್ ಅವರು ಬಸ್ತಿ ಶುಕ್ರಾನಿಗೆ ಸಂಬಂಧಿಸಿದವರಾಗಿದ್ದರು. ಜಿಲ್ಲಾ ಬಹಾವಲ್ಪೂರ್ ಆಗಿತ್ತು. ಇವರು 2018 ರಲ್ಲಿ ಜರ್ಮನಿಗೆ ಬಂದಿದ್ದರು. ಇಂದು ಅವರ ಮೊದಲ ಭೇಟಿಯಾಗಿತ್ತು. ಅವರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೀಗೆ ಹೇಳುತ್ತಾರೆ. ಹುಝೂರ್ ಅನ್ವರ್ ಅವರ ಪ್ರಕಾಶಮಯ ಮುಖ ನೋಡಿ ನನಗೆ ಮಾತನಾಡಲು ಸಾಧ್ಯವಾಗಲಿಲ್ಲ, ಹುಝೂರರ ಪ್ರೀತಿ ನನ್ನ ಮತ್ತು ನನ್ನ ಕುಟುಂಬದ ಮೇಲೆ ಅಸಂಖ್ಯೆಯ ಅನುಗ್ರಹಗಳಿಗೆ ಕಾರಣವಾಗಿವೆ. ಪಾಕಿಸ್ತಾನದಲ್ಲಿ ಬಸ್ತಿ ಶುಕ್ರಾನಿಯ ಪರಿಸ್ಥಿತಿಗಳು ಬಹಳ ಹದಗೆಟ್ಟಿವೆ. ಜಮಾಅತನ್ನು ವಿರೋಧಿಸುವವರು ಹೆಚ್ಚಿದ್ದಾರೆ. ನಾನು ಹುಝೂರೆ ಅನ್ವರ್(ಅಬಿಅ)ರ ಸೇವೆಯಲ್ಲಿ ಪ್ರಾರ್ಥಿಸಲು ಬೇಡಿಕೊಂಡಾಗ ಹುಝೂರೆ ಅನ್ವರ್(ಅಬಿಅ) ಹೇಳಿದರು. ನಾನು ದುಆ ಮಾಡುವೆನು, ಅಲ್ಲಾಹನು ಅನುಗ್ರಹಿಸಿವನು. ಆಮೀನ್.

ಮುಹಮ್ಮದ್ ಅಕ್ರಮ್ ಸಾಹಿಬ್ ಎಂಬ ಮಿತ್ರರು, ಅವರು ಬಹಾವಲ್ಪೂರ್ ನಿಂದ ಬಂದಿದ್ದರು. ಹೇಳಿದರು. ಇಂದು ಹುಝೂರರ ಜೊತೆ ಇದು ನನ್ನ ಮೊದಲ ಭೇಟಿಯಾಗಿತ್ತು. ಹುಝೂರೆ ಅನ್ವರ್(ಅಬಿಅ)ರ ಜೊತೆ ಭೇಟಿಯಾಗಿ ನಾನು ಮತ್ತೊಮ್ಮೆ ಈ ಜಗತ್ತಿಗೆ ಬಂದಿದ್ದೆನು ಎಂಬ ಭಾಸವಾಗುತ್ತದೆ. ಮನಸ್ಸಿಗೆ ಸಮಾಧಾನ ದೊರೆಯಿತು. ಹುಝೂರೆ ಅನ್ವರ್(ಅಬಿಅ)ರ ಸೇವೆಯಲ್ಲಿ ಪ್ರಾರ್ಥಿಸಲು ಬೇಡಿಕೊಂಡೆ. ಆಗ ಮನಸ್ಸಿಗೆ ತೃಪ್ತಿಯಾಯಿತು. ಜೇನು ಸಹ ಪ್ರಸಾದಿತಗೊಳಿಸಿದೆ.

ಇಹ್‌ಸಾನ್ ಅಹ್ಮದ್ ಸಾಹಿಬ್‌ರ ಸಂಬಂಧ ರಬ್ವಾದಿಂದಿದೆ. ಅವರದ್ದು ಸಹ ಹುಝೂರೆ ಅನ್ವರ್(ಅಬಿಅ)ರ ಜೊತೆ ಇದು ಮೊದಲ ಭೇಟಿಯಾಗಿತ್ತು. ಅವರು ಹೇಳುತ್ತಾರೆ. ನಾನು ತುಂಬಾ ಸಂತುಷ್ಟನಾಗಿದ್ದೇನೆ. ನಾನು ಮನಬಿಚ್ಚಿ ಮಾತನಾಡಿದ್ದೇನೆ. ಅವರ ಜೊತೆ ಅವರ 9 ವರ್ಷದ ಪುತ್ರ ಶಾಹ್‌ಝೇಬ್‌ನಿದ್ದನು. ಹೇಳಿದನು. ನನಗೆ ನಂಬಲು ಆಗುತ್ತಿರಲಿಲ್ಲ. ಒಂದು ಕನಸಿನಂತೆ ಕಾಣುತ್ತಿತ್ತು. ಪ್ರೀತಿಯ ಹುಝೂರೆ ಅನ್ವರ್(ಅಬಿಅ)ರು ನನ್ನ ಆಮೀನ್ ಮಾಡಿಸಿದರು ಮತ್ತು ನನಗೆ gifts ನೀಡಿದರು. ಹುಝೂರೆ ಅನ್ವರ್(ಅಬಿಅ) ತುಂಬಾ ಪ್ರೀತಿಸಿದರು.

**(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.